# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮೇ 27, 2021

ಸಂಪುಟ : 48 ಸಂಚಿಕೆ : 13 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಜಿಲ್ಲಾಸ್ಪತ್ರೆ ಆವರಣದಲ್ಲಿ ಪಾಲಿಕೆಯಿಂದ ಕುಟೀರ

### ರೋಗಿಗಳ ಜೊತೆ ಬಂದವರಿಗೆ ರಾತ್ರಿ ತಂಗಲು ಸೂಕ್ತ ವ್ಯವಸ್ಥೆ



ದಾವಣಗೆರೆ, ಮೇ 26- ಇಲ್ಲಿನ ಜಿಲ್ಲಾ ಚಿಗಟೇರಿ ಆಸ್ಪತ್ರೆ ಆವರಣದಲ್ಲಿ ರೋಗಿಗಳ ಜೊತೆ ಬಂದವರು ತಂಗಲು ಮಹಾನಗರ ಪಾಲಿಕೆ ವತಿಯಿಂದ ಕುಟೀರದ ವ್ಯವಸ್ಥೆ ಕಲ್ಪಿಸಲಾಗಿದೆ.

ಆಸ್ಪತ್ರೆಗೆ ದಾಖಲಾದ ರೋಗಿಗಳನ್ನು ನೋಡಿಕೊಳ್ಳಲು ಬರುವ ಸ್ನೇಹಿತರು ಸಂಬಂಧಿಕರು ರಾತ್ರಿ ಆಸ್ಪತ್ರೆ ಆವರಣದಲ್ಲಿಯೇ ಮಲಗುತ್ತಿದ್ದುದನ್ನು ಗಮನಿಸಿದ್ದ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಅವರಿಗಾಗಿ ಸೂಕ್ತ ವ್ಯವಸ್ಥೆಯೊಂದನ್ನು ಏಕೆ ಕಲ್ಪಿಸಬಾರದು ಎಂದು ಆಲೋಚಿಸಿ, ಆಯುಕ್ತರೊಂದಿಗೆ ಚರ್ಚಿಸಿ ಕಾರ್ಯರೂಪಕ್ಕೆ ತಂದಿದ್ದಾರೆ.

ಈ ಕುರಿತು 'ಜನತಾವಾಣಿ'ಯೊಂದಿಗೆ ಮಾತನಾಡಿದ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಮೇಯರ್ ಅವರ ಆಶಯದಂತೆ ಆಸ್ಪತ್ರೆ ಆವರಣದಲ್ಲಿ ಶಾಮಿಯಾನ ಹಾಕಲಾಗಿದೆ. ಇದು ಶೀಟ್ ಶಾಮಿಯಾನವಾಗಿದ್ದು, ಮಳೆ ನೀರು ಬೀಳದಂತೆ ತಡೆಯಲಿದೆ. ನೆಲದ ಮೇಲೆ ಡಯಾಜ್ ಹಾಕಿ ಕೆಂಪು ಕಾರ್ಪೆಟ್ ಹಾಕಲಾಗಿದೆ. ಸುಮಾರು 70 ಜನರು ಇಲ್ಲಿ ಮಲಗಬಹುದಾಗಿದೆ. ಈಗಾಗಲೇ 35-40ಜನ ರಾತ್ರಿ ಇಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಅವರಿಗೆ ನೀರಿನ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದು ಹೇಳಿದರು.

ವಯಸ್ಸಾದ ಕೆಲವರು ನಮಗೆ ಮೇಲೆ ಮಲಗಲು ಸಾಧ್ಯವಿಲ್ಲ ಎಂದ ಕಾರಣಕ್ಕಾಗಿ ನೆಲದ ಮೇಲೆಯೂ ಕೆಂಪು ಕಾರ್ಪೆಟ್ ಹಾಸಿ ವ್ಯವಸ್ಥೆ ಮಾಡಲಾಗಿದೆ. ರೋಗಿಗಳ ಜೊತೆ ಬಂದವರಿಗೆ ಕಲ್ಯಾಣ ಮಂಟಪದಲ್ಲಿ ವ್ಯವಸ್ಥೆ ಮಾಡುವ ಚಿಂತನೆ ನಡೆದಿದ್ದು, ಆದರೆ ಅದು ದೂರವಾಗುತ್ತದೆ ಮತ್ತು ಅವರು ಎಲ್ಲೆಂದರಲ್ಲಿ ಸುತ್ತಾಡುವ ಸಂಭವ ಹೆಚ್ಚು ಎಂದು ಆಸ್ಪತ್ರೆ ಆವರಣದಲ್ಲಿಯೇ ಇಂತಹ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

# ಪಂಚಾಯ್ತಿ ಸಿಬ್ಬಂದಿಗಳೂ ಕೊರೊನಾ ವಾರಿಯರ್ಸ್

**ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಪಿಡಿಒಗಳ ಜೊತೆಗಿನ ಸಂವಾದದ ಸಂದರ್ಭದಲ್ಲಿ ಸಿಎಂ ಘೋಷಣೆ**

ಬೆಂಗಳೂರು, ಮೇ 26 - ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಿಬ್ಬಂದಿಯನ್ನು ಕೊರೊನಾ ವಾರಿಯರ್ಸ್ ಎಂದು ಪರಿಗಣಿಸಿ, ಕಂದಾಯ ಇಲಾಖೆ ಸಿಬ್ಬಂದಿಗೆ ನೀಡುತ್ತಿರುವ ಸೌಲಭ್ಯವನ್ನು ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಮೈಸೂರು, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳ ಆಯ್ದ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಿಡಿಓಗಳೊಂದಿಗೆ ಸಂವಾದ ನಡೆಸಿದ ಸಂದರ್ಭದಲ್ಲಿ ಈ ಘೋಷಣೆ ಮಾಡಿದ್ದಾರೆ.

ಕೊರೊನಾ 2ನೇ ಅಲೆ ಮೊದಲಿಗಿಂತ ವಿಭಿನ್ನವಾಗಿದೆ, ಹೆಚ್ಚು ಹಾನಿಕಾರಕವಾಗಿದೆ. ಕೊರೊನಾ ಸೋಂಕು ತ್ವರಿತವಾಗಿ ವ್ಯಾಪಿಸುತ್ತಿದ್ದು, ತುರ್ತು ನಿವಾರಣಾ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವಾಗಿದೆ ಎಂದು ಸಂವಾದದಲ್ಲಿ ಮುಖ್ಯಮಂತ್ರಿ ತಿಳಿಸಿದ್ದಾರೆ.

ಕಳೆದ ವಾರ ಘೋಷಿಸಿದ ಪ್ಯಾಕೇಜ್‌ನಲ್ಲಿ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೂ ಎಸ್.ಡಿ.ಆರ್.ಎಫ್ ನಿಧಿಯಿಂದ ತಲಾ 50,000 ರೂ. ಗಳನ್ನು ಬಿಡುಗಡೆ ಮಾಡಲು ಆದೇಶಿಸಿರುತ್ತೇನೆ. ಸದ್ಯದಲ್ಲಿಯೇ ಹಣ ತಮ್ಮ ಕೈ ಸೇರಲಿದೆ ಎಂದವರು ಹೇಳಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಈಗಾಗಲೇ 14ನೇ ಹಣಕಾಸು ಆಯೋಗದ ಅನುದಾನದ ಉಳಿಕೆ ಹಣ, 15ನೇ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನ ಹಾಗೂ ಗ್ರಾಮ ಪಂಚಾಯತ್ ಸ್ವಂತ ಸಂಪನ್ಮೂಲವನ್ನು ಈ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ.

ಕೋವಿಡ್ ಮುನ್ನೆಚ್ಚರಿಕೆಯ ಮಾರ್ಗ ಸೂಚಿಗಳು ಹಾಗೂ ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ವಿಧಿಸಿರುವ ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದ ಮುಖ್ಯಮಂತ್ರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಸಂತೆ, ಜಾತ್ರೆ ಮತ್ತಿತರೆ ಕಾರ್ಯಕ್ರಮಗಳ ನಿಷೇಧವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು. ಸೋಂಕಿತರಿಗೆ ನೆರವಾಗಲು ಗ್ರಾಮ ಪಂಚಾಯತ್‌ಗಳಲ್ಲಿ ಹೆಲ್ಪ್ ಡೆಸ್ಕ್ ಹಾಗೂ ಹೆಲ್ಪ್




ಸಂಗ್ರಹ ಚಿತ್ರ

ಲೈನ್ ಗಳನ್ನು ಪ್ರಾರಂಭಿಸಬೇಕು. ಕಾರ್ಯಪಡೆಗಳ ಜೊತೆ ಕಾರ್ಯನಿರ್ವಹಿಸಲು ಸ್ವಯಂ ಸೇವಾ ಸಂಸ್ಥೆಗಳು ಹಾಗೂ ದಾನಿಗಳ ನೆರವನ್ನು ಪಡೆಯ ಬಹುದು ಎಂದು ಮುಖ್ಯಮಂತ್ರಿಗಳು ಸಲಹೆ ನೀಡಿದರು.

ಮಕ್ಕಳು, ಮಹಿಳೆಯರು, ವಿಶೇಷಚೇತನರು ಹಾಗೂ ವೃದ್ಧರು ತೊಂದರೆಯಲ್ಲಿದ್ದಲ್ಲಿ ಅವರಿಗೆ ಊಟೋಪಚಾರದ ವ್ಯವಸ್ಥೆ ಮಾಡಬೇಕು. ಒಂದು ಪಕ್ಷ ಸೋಂಕಿತರು ಮೃತಪಟ್ಟು ಮಕ್ಕಳು ಅನಾಥರಾದಲ್ಲಿ ಅವರನ್ನು ಯಾರು ದತ್ತು ತೆಗೆದುಕೊಳ್ಳಲು ಬಿಡಬಾರದು. ಬದಲಾಗಿ 'ಮಕ್ಕಳ ರಕ್ಷಣಾ ಸಮಿತಿ'ಗಳಿಗೆ ಸೇರಿಸಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಮನೆಗಳು ಸಣ್ಣದಾಗಿರುವ ಕುಟುಂಬಗಳಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡರೆ, ಸೋಂಕಿತರನ್ನು ಕಡ್ಡಾಯವಾಗಿ ಕೋವಿಡ್ ಕೇರ್ ಸೆಂಟರ್‌ಗಳಿಗೆ ದಾಖಲಿಸುವಂತೆ ಮುಖ್ಯಮಂತ್ರಿಗಳು ಎಲ್ಲಾ ಗ್ರಾಮ (2ನೇ ಪುಟಕ್ಕೆ)

## ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ ನಿಧನ



ಬೆಂಗಳೂರು, ಮೇ 26 - ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿ ಅವರು ನಿಧನರಾಗಿದ್ದು, ಅವರಿಗೆ 104 ವರ್ಷ ವಯಸ್ಸಾಗಿತ್ತು.

ಹೃದಯ ಸಂಬಂಧಿ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ದೊರೆಸ್ವಾಮಿ ಅವರನ್ನು ಜಯದೇವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಬುಧವಾರ ಮಧ್ಯಾಹ್ನ ಹೃದಯಾಘಾತದಿಂದ ಅವರು ನಿಧನರಾಗಿದ್ದಾರೆ.

ಕೆಲದಿನಗಳ ಹಿಂದೆ ಹೃದಯ ಸಮಸ್ಯೆ ಸಂಬಂಧ ಜಯದೇವ ಆಸ್ಪತ್ರೆಗೆ ದಾಖಲಾದ ಅವರಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು.

ಆಗ ಕೊರೊನಾ ಸೋಂಕು ಖಚಿತಪಟ್ಟಿತ್ತು. ನಂತರ ಚೇತರಿಸಿಕೊಂಡು ಜಯನಗರದಲ್ಲಿರುವ ನಿವಾಸಕ್ಕೆ ತೆರಳಿದ್ದರು. (2ನೇ ಪುಟಕ್ಕೆ)


## ಜಿಲ್ಲೆಯಲ್ಲಿ 1309 ಪಾಸಿಟಿವ್, 3 ಸಾವು

ದಾವಣಗೆರೆ, ಮೇ 26- ಜಿಲ್ಲೆಯಲ್ಲಿ ಬುಧವಾರ 1309 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಮೂವರು ಸಾವನ್ನಪ್ಪಿದ್ದಾರೆ. 598 ಜನರು ಗುಣಮುಖರಾದ ಬಗ್ಗೆ ಜಿಲ್ಲಾಡಳಿತದ ಪ್ರಕಟಣೆಯಲ್ಲಿ ತಿಳಿಸಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 527, ಹರಿಹರ 120, ಜಗಳೂರು 45, ಚನ್ನಗಿರಿ 280, ಹೊನ್ನಾಳಿ 296 ಹಾಗೂ ಹೊರ ಜಿಲ್ಲೆಯ 41 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 5233ಕ್ಕೆ ಏರಿಕೆಯಾಗಿದೆ. ಇದೇ ಮೊದಲ ಬಾರಿಗೆ ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರಕರಣಗಳು (2ನೇ ಪುಟಕ್ಕೆ)

## ನಾಯಕತ್ವ: ಪಕ್ಷದ ನಿರ್ಧಾರಕ್ಕೆ ಬದ್ಧ



ಬೆಂಗಳೂರು, ಮೇ 26 - ನಾಯಕತ್ವ ಬದಲಾವಣೆ ವಿಷಯದಲ್ಲಿ ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ದ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿ ಯೂರಪ್ಪ ಅವರು ಆರ್‌ಎಸ್‌ಎಸ್‌ಗೆ ಸ್ಪಷ್ಟಪಡಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಆರ್‌ಎಸ್‌ಎಸ್‌ನ ರಾಷ್ಟ್ರೀಯ ಹಿರಿಯ ಸಂಚಾಲಕ ಮುಕುಂದಜೀ ಅವರನ್ನು ಕಳೆದ ಎರಡು, ಮೂರು ದಿನಗಳ ಹಿಂದೆ ಭೇಟಿ ಮಾಡಿದ ಮುಖ್ಯಮಂತ್ರಿಯವರು ಅಧಿಕಾರದಲ್ಲಿ ಮುಂದುವರೆಸುವ ಇಲ್ಲವೇ ಬಿಡುವ ತೀರ್ಮಾನಕ್ಕೆ ನಾನು ಪಕ್ಷದ ನಿರ್ಧಾರಕ್ಕೆ ಅಚಲನಾಗಿರುತ್ತೇನೆ ಎಂದು ಭೇಟಿಯ ಸಂದರ್ಭದಲ್ಲಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿನ ನಾಯಕತ್ವ ಬದಲಾವಣೆಗೆ ದೆಹಲಿ ನಾಯಕರು ಮುಂದಾಗಿರುವ ಬೆನ್ನಲ್ಲೇ ಯಡಿ ಯೂರಪ್ಪ ಅವರು, ತಮ್ಮ ನಿಲುವು ಸ್ಪಷ್ಟಪಡಿಸಿರು ವುದರಿಂದ ಎಲ್ಲ ಊಹಾಪೋಹ ಹಾಗೂ ಭಿನ್ನಮತಕ್ಕೆ ತೆರೆ ಎಳೆದಿದ್ದಾರೆ. ಜುಲೈ 26, 2021ಕ್ಕೆ ಮುಖ್ಯ ಮಂತ್ರಿಯಾಗಿ ಯಡಿಯೂರಪ್ಪನವರು ಎರಡು ವರ್ಷ ಅವಧಿ ಪೂರ್ಣಗೊಳಿಸುತ್ತಾರೆ. ಅದಕ್ಕೂ ಮುನ್ನವೇ ಇಲ್ಲವೇ ನಂತರ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹೊಸ ನಾಯಕರಿಗೆ ಹಸ್ತಾಂತರಗೊಳ್ಳಲಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ವಯೋಮಿತಿ ಮೀರಿದರೂ ಪಕ್ಷದ ನಿಯಮಾವಳಿಯನ್ನು ಬದಿಗಿರಿಸಿ, ವಿಶೇಷ ಪ್ರಕರಣ ಎಂದು (2ನೇ ಪುಟಕ್ಕೆ)

### ಸಿಎಂ ಬದಲಾವಣೆಗೆ ಬಿಜೆಪಿಯಲ್ಲಿ ತೆರೆಮರೆಯ ಕಸರತ್ತು

ಬೆಂಗಳೂರು, ಮೇ 26 – ರಾಜ್ಯ ಎರಡನೇ ಕೊರೊನಾ ಅಲೆಗೆ ಸಿಲುಕಿ ತತ್ತರಿಸಿರುವಾಗಲೇ, ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರ ಬದಲಾವಣೆಯ ಮಾತುಗಳು ಹರಿದಾಡುತ್ತಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ಸಚಿವರು ಹಾಗೂ ಶಾಸಕರು, ಯಡಿಯೂರಪ್ಪ ಅವರು ಅವಧಿ ಪೂರೈಸಲಿದ್ದಾರೆ ಹಾಗೂ ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಲಿದ್ದಾರೆ ಎಂದು ಹೇಳಿದ್ದಾರೆ. ಇದೇ ಮೊದಲ ಬಾರಿಗೆ ಸಚಿವರು ಹಾಗೂ ಶಾಸಕರು ನಾಯಕತ್ವದ ಬದಲಾವಣೆ ಪ್ರಯತ್ನದ ಬಗ್ಗೆ ನೇರವಾಗಿ ಹೇಳಿಕೆ ನೀಡಿದ್ದಾರೆ.

ಕೊರೊನಾ ಬಿಕ್ಕಟ್ಟು ನಿಭಾಯಿಸಿದ ರೀತಿ, ಭ್ರಷ್ಟಾಚಾರದ (3ನೇ ಪುಟಕ್ಕೆ)

## 50 ಬೆಡ್‌ಗಳು, 4 ಆಂಬ್ಯುಲೆನ್ಸ್ ಸೌಲಭ್ಯ ಕಲ್ಪಿಸಿದ ಎಂ.ಪಿ.ಆರ್.



ಹೊನ್ನಾಳಿ, ಮೇ 26- ಅವಳಿ ತಾಲ್ಲೂಕುಗಳಲ್ಲಿ ಕೊರೊನಾ ಸೋಂಕು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ತಮ್ಮ ತಂದೆ-ತಾಯಿ ಪಂಚಾಕ್ಷರಯ್ಯ ಹಾಗೂ ಕಮಲಮ್ಮನವರ ಸ್ಮರಣಾರ್ಥ 4 ಆಂಬ್ಯುಲೆನ್ಸ್ ಹಾಗೂ 50 ಹಾಸಿಗೆಗಳ ವ್ಯವಸ್ಥೆ ಕಲ್ಪಿಸಿದ್ದು, ಇಲ್ಲಿನ ಜನತೆಯ ಜೀವ ರಕ್ಷಣೆಗೆ ಹೆಚ್ಚು ಸಹಕಾರಿಯಾಗಲಿದೆ ಎಂದು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಹೇಳಿದರು.

ಅವರು, ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಆಸ್ಪತ್ರೆಯಲ್ಲಿ ಆಕ್ಸಿಜನ್ ಜನರೇಟರ್ ಕಾಮಗಾರಿ ವೀಕ್ಷಿಸಿ, ಆಸ್ಪತ್ರೆ ಹೊರಾಂಗಣದಲ್ಲಿ ರೋಗಿಗಳಿಗೆ ನಡೆಯುತ್ತಿದ್ದ ತಪಾಸಣೆ ಕಾರ್ಯ ಪರಿಶೀಲಿಸಿ ನಂತರ ರೇಣುಕಾಚಾರ್ಯ ನೀಡಿದ ಬೆಡ್‌ಗಳು ಹಾಗೂ ಆಂಬ್ಯುಲೆನ್ಸ್ ಸೇವೆಗೆ ಚಾಲನೆ ನೀಡಿ ಮಾತನಾಡಿದರು.

ರೇಣುಕಾಚಾರ್ಯ ಅವರು ರೋಗಿಗಳಿಗೆ ಊಟ, ವಸತಿ ಕಲ್ಪಿಸುವ ಮೂಲಕ ರೋಗಿಗಳ ಮೇಲೆ ತೋರುತ್ತಿರುವ ಕಾಳಜಿ ಇತರರಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಆಕ್ಸಿಜನ್ ಜನರೇಟರ್ ವ್ಯವಸ್ಥೆಯ ಕಾರ್ಯವು ಚನ್ನಗಿರಿ, ಹರಿಹರದಲ್ಲಿ ನಡೆಯುತ್ತಿದೆ.


ಹರಪನಹಳ್ಳಿಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುತ್ತೇನೆ. ನಾನೂ ಕೂಡ ನಮ್ಮ ಪೋಷಕರ ಹೆಸರಿನಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲೂ ಈ ಸೌಲಭ್ಯ ಕಲ್ಪಿಸುವಲ್ಲಿ ಮುಂದಾಗಿದ್ದೇನೆ. ಮುಂದಿನ 15 ದಿನ ಗಳಿಗೆ ಆಗುವಷ್ಟು ಜಿಲ್ಲೆಗೆ ಆಕ್ಸಿಜನ್ ಸೌಲಭ್ಯವಿದೆ ಎಂದರು.

ಶಾಸಕ ರೇಣುಕಾಚಾರ್ಯ ಮಾತನಾಡಿ, ಕೊರೊನಾ ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಕಂಡು ತಾವು ಅಂಬ್ಯುಲೆನ್ಸ್ ಹಾಗೂ ಮಂಚದೊಂದಿಗೆ ಹಾಸಿಗೆಗಳನ್ನು ವಿತರಿಸುತ್ತಿರುವುದಾಗಿ ಹೇಳಿದರು.


ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮಾತನಾಡಿ, ಜಿಲ್ಲೆಯಲ್ಲಿ 1059, ಹೊನ್ನಾಳಿ ಆಸ್ಪತ್ರೆಯಲ್ಲಿ 416 ಜನರು ಇದೀಗ ಕೊರೊನಾ ಚಿಕಿತ್ಸೆ ಪಡೆಯುತ್ತಿದ್ದಾರೆ. ಜಿಲ್ಲೆಯ ಎಲ್ಲಾ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ಪರಿಣಾಮಕಾರಿ ಕೆಲಸದಿಂದಾಗಿ ಒಂದು ವಾರದ ಒಳಗಾಗಿ ಕೊರೊನಾ ಸಾವಿನ ಪ್ರಮಾಣ ಇಳಿಮುಖವಾಗಲಿದೆ ಎಂಬ ಭರವಸೆ ಇದೆ ಎಂದರು.

ಡಿಹೆಚ್‌ಓ ನಾಗರಾಜ್, ತಹಶೀಲ್ದಾರ್ ಬಸವರಾಜ್ ಕೋಟೂರ್, ಆರೋಗ್ಯಾಧಿಕಾರಿ ಕೆಂಚಪ್ಪ, ಪಟ್ಟಣ ಪಂಚಾಯಿತಿ ಅಧ್ಯಕ್ಷ ಶ್ರೀಧರ್, ಸದಸ್ಯ ರಂಗಪ್ಪ, ಜಿಪಂ ಸದಸ್ಯ ಸುರೇಂದ್ರನಾಯ್ಕ್, ತಾಲ್ಲೂಕಿನ ಅಧಿಕಾರಿಗಳಿದ್ದರು.

## ಅನಾಥ ಪ್ರಾಣಿಗಳಿಗೆ ಅನ್ನದಾತ ನಮ್ಮ ದಾವಣಗೆರೆ ತಂಡ









**ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ**

ದಾವಣಗೆರೆ, ಮೇ 26- ಒಂದೆಡೆ ಲಾಕ್‌ಡೌನ್ ಪರಿಣಾಮ ಅಂಗಡಿ ಮುಂಗಟ್ಟುಗಳು ಮುಚ್ಚಿವೆ. ಮತ್ತೊಂದೆಡೆ ಬಿಸಿಲ ಬೇಗೆ. ಪರಿಣಾಮ ಬೀದಿ ದನಗಳು,ಬೆಕ್ಕು, ನಾಯಿಗಳು, ಕೋತಿಗಳು, ಪಕ್ಷಿಗಳು ನೀರು ಆಹಾರ ಸಿಗದೆ ತತ್ತರಿಸುತ್ತಿವೆ.

ಎಷ್ಟು ದಿನ ಲಾಕ್‌ಡೌನ್ ಎಂದು ಚಿಂತಿಸುವ ಜನತೆ, ತನಗೆ ತಿಂಗಳವರೆಗೆ ಬೇಕಾದಷ್ಟು ಅಗತ್ಯ ವಸ್ತುಗಳನ್ನು ಮುಗಿ ಬಿದ್ದು ಖರೀದಿಸಿಟ್ಟುಕೊಳ್ಳುತ್ತಿದ್ದಾರೆ ಹಾಗೂ ಬಳಸಿಕೊಳ್ಳುತ್ತಿದ್ದಾರೆ. ಕೆಲವರು ನಿರ್ಗತಿಕರಿಗೆ, ಬಡವರಿಗೆ ಆಹಾರದ ಕಿಟ್ ಕೊಟ್ಟರೆ, ಮತ್ತೆ ಕೆಲವರು ಕೊರೊನಾ ಸೋಂಕಿತರಿಗೆ ಆಹಾರ ನೀಡಿ ಮಾನವೀಯತೆ ಮೆರೆಯುತ್ತಿದ್ದಾರೆ.

ಆದರೆ ಪ್ರಸ್ತುತ ಸನ್ನಿವೇಶದಲ್ಲಿ ಪ್ರಾಣಿ-ಪಕ್ಷಿಗಳ ಸ್ಥಿತಿ ಹೇಗಿದೆ? ಅವುಗಳು ಆಹಾರಕ್ಕಾಗಿ ಏನು ಮಾಡುತ್ತಿವೆ ಎಂಬ ಕಿಂಚಿತ್ತು ಯೋಚನೆಯೂ ಬಹುತೇಕರಿಗಿಲ್ಲ. ಪ್ರಾಣಿ, ಪಕ್ಷಿಗಳ ಬಗ್ಗೆ ಗಮನ ಹರಿಸುವವರ ಸಂಖ್ಯೆ ಮಾತ್ರ ಬಹು ವಿರಳ. ಇಂತಹ ಅತಿ ವಿರಳ ಪ್ರಾಣಿ-ಪಕ್ಷಿ ಪ್ರಿಯರ ಸಾಲಿನಲ್ಲಿ ಮುಂಚೂಣಿಯಲ್ಲಿರುವುದು 'ನಮ್ಮ ದಾವಣಗೆರೆ' ಟೀಂ.

ಹೌದು, ಯಾವುದೇ ರೀತಿಯ ಪ್ರಚಾರ ಬಯಸದೆ 17 ಜನರ ತಂಡವೊಂದು ಲಾಕ್‌ಡೌನ್‌ನಿಂದ ಸಂಕಷ್ಟಕ್ಕೊಳಗಾದ ಜನರಿಗೆ ಸಹಾಯ ಮಾಡುವ ಜೊತೆ ಜೊತೆಗೆ ಪ್ರಾಣಿ-ಪಕ್ಷಿಗಳಿಗೂ ಆಹಾರ, ನೀರು ಒದಗಿಸುವ ಕೆಲಸ ಮಾಡುತ್ತಿದೆ.

> **ಬಹುತೇಕ ಜನರು ಬಡವರಿಗೆ ಕಿಟ್ ವಿತರಿಸುತ್ತಿದ್ದಾರೆ. ಆದರೆ ಪ್ರಾಣಿಗಳತ್ತ ಗಮನ ಹರಿಸುತ್ತಿಲ್ಲ. ನಾವು ಈ ಹಿಂದೆ ಕೊರೊನಾ ಪ್ರಥಮ ಅಲೆ ಬಂದಾಗಲೂ ಪ್ರಾಣಿಗಳಿಗೆ ಆಹಾರ ನೀಡುತ್ತಿದ್ದೆವು. ಈ ಬಾರಿಯೂ ಲಾಕ್‌ಡೌನ್ ಆರಂಭವಾದಾಗಿನಿಂದ ಆಹಾರ ನೀಡುತ್ತಿದ್ದೇವೆ. ಲಾಕ್‌ಡೌನ್ ಕೊನೆ ದಿನದವರೆಗೂ ನಮ್ಮ ಈ ಸೇವೆ ನಡೆಯುತ್ತದೆ.**
>
> **- ರೋಹಿತ್ ಎಸ್.ಜೈನ್**

ಫೇಸ್ ಬುಕ್‌ನಲ್ಲಿ 'ನಮ್ಮ ದಾವಣಗೆರೆ' ಎಂಬ ಗ್ರೂಪ್ ಇದೆ. ಈ ಗ್ರೂಪ್‌ನ ಸದಸ್ಯರು ಬೇರೆ ಯಾರೊಬ್ಬರಿಂದಲೂ ಒಂದು ರೂ. ಸಹ ಹಣ ಪಡೆಯದೆ, ತಾವೇ ಹಣ ಕೂಡಿಸಿ ಇಡೀ ಮನುಕುಲಕ್ಕೆ ಮಾದರಿಯಾಗುವಂತಹ ಕಾರ್ಯ ಮಾಡುತ್ತಿದ್ದಾರೆ.

ಅಂದ ಹಾಗೆ ಈ ತಂಡಕ್ಕೆ ಜಿಲ್ಲಾಧಿಕಾರಿಗಳ ಮೆಚ್ಚುಗೆಯೂ ಇದೆ. ಸ್ವತಃ ಜಿಲ್ಲಾಡಳಿತದಿಂದ 17 ಸದಸ್ಯರಿಗೆ ಪಾಸ್ ನೀಡಲಾಗಿದೆ. ಈ ಸದಸ್ಯರು ಪಿಪಿಇ ಕಿಟ್ ಧರಿಸಿ ಕೊರೊನಾ ಸೋಂಕಿತರಿಗೂ ಸಹಾಯ ಮಾಡಬಹುದು. ಅಷ್ಟರ ಮಟ್ಟಿಗೆ ಜಿಲ್ಲಾಡಳಿತದ ಸಹಾಯ ದೊರೆತಿದೆ.

ಬೀದಿ ಹಸುಗಳು ಬಂದರೆ ಮನೆಯಲ್ಲಿ ಅಳಿದುಳಿದ ಆಹಾರ ನೀಡುವವರೇ ಹೆಚ್ಚು. ಆದರೆ ಈ ತಂಡ ನಿತ್ಯ ತಾಜಾ ಚಪಾತಿ, ಹಣ್ಣು-ತರಕಾರಿಗಳನ್ನು ಹಸುಗಳಿಗೆ ನೀಡುತ್ತದೆ.

ನಾಯಿಗಳಿಗೆ ಬಿಸ್ಕಿಟ್ ಕೊಟ್ಟರೆ ಡಯಾಬಿಟಿಸ್ ಹೆಚ್ಚಾಗುತ್ತದೆ ಎಂಬ ಕಾರಣಕ್ಕಾಗಿ ಚಪಾತಿ ಹಾಗೂ ಮೊಸರು ನೀಡಲಾಗುತ್ತಿದೆ. ಇನ್ನು ನಾಯಿ ಮರಿಗಳಿಗೆ ಹಾಲು ಕೊಡಲಾಗುತ್ತದೆ. ಅದರೊಟ್ಟಿಗೆ ಜೈನ ಸಮುದಾಯದ ಮನೆಗಳಲ್ಲಿ ಮಾಡಲ್ಪಡುವ ಕಾಕಡವನ್ನೂ ಹಾಲಿನ ಜೊತೆ ನೀಡಲಾಗುತ್ತಿದೆ. ವೆಟರ್ನರಿ ವೈದ್ಯರ ಸಲಹೆ ಪಡೆದೇ ಪ್ರಾಣಿಗಳಿಗೆ ಉತ್ತಮ ಆಹಾರ ನೀಡುತ್ತಿದೆ ಈ ತಂಡ.

ಬೇರೆಯವರಿಂದ ಹಣ ಪಡೆದು ಅವರಿಂದ ಆಪಾದನೆಗೊಳಗಾಗುವ ಬದಲು ನಾವೇ ಹಣ ಕೂಡಿಟ್ಟುಕೊಂಡು ಸೇವೆ ಮಾಡುವುದು ಉತ್ತಮ. ನಮ್ಮ ತಂಡವು ಪ್ರಾಣಿ-ಪಕ್ಷಿಗಳಿಗೆ ಆಹಾರ ನೀಡುವುದನ್ನು ನೋಡಿ ಪ್ರೇರಿತರಾದ ಅನೇಕರು ತಮ್ಮ ಮನೆ ಹಾಗೂ ಬೀದಿಗಳಲ್ಲಿ ಆಹಾರ ನೀಡುತ್ತಿದ್ದಾರೆ ಎನ್ನುತ್ತಾರೆ ತಂಡದ ಸದಸ್ಯ ರೋಹಿತ್ ಎಸ್.ಜೈನ್.

ಕೇವಲ ದಾವಣಗೆರೆ ಅಷ್ಟೇ ಅಲ್ಲ, ರಾಯಚೂರು, ಯಾದಗಿರಿ, ಬಿಜಾಪುರ, ಬೆಂಗಳೂರು, ಮೈಸೂರು ಹೀಗೆ ಹೊರ ಜಿಲ್ಲೆಯ ಕೆಲವರು ಅಲ್ಲಿನ ಪ್ರಾಣಿಗಳಿಗೆ ಆಹಾರ ಅಗತ್ಯವಿದೆ ಎಂದು ಫೋಟೋ ಕಳುಹಿಸಿದಾಗ ನಮ್ಮ ತಂಡದಿಂದಲೇ ಆನ್‌ಲೈನ್ ಮೂಲಕ ಹಣ ನೀಡಿದ್ದೇವೆ ಎಂದರು (2ನೇ ಪುಟಕ್ಕೆ)


## ಭಾವಪೂರ್ಣ ಶ್ರದ್ಧಾಂಜಲಿ



ಆನಂದಪ್ಪ ಎಸ್.ಎಲ್. ಇಂಜಿನಿಯರ್
ಇವರ ಮಾತೃಶ್ರೀಯವರಾದ

**ಶ್ರೀಮತಿ ದ್ಯಾಮಮ್ಮ**

ಇವರು ದಿ.: 22.05.2021ರಂದು ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

✦ ಆರ್.ವಿ. ಕನ್‌ಸ್ಟ್ರಕ್ಷನ್ ಬಳ್ಳಾರಿ ಗುತ್ತಿಗೆದಾರರು
ಆರ್. ನಾರಾಯಣ ರೆಡ್ಡಿ.
✦ ಬಿ. ಬಸವರಾಜಸ್ವಾಮಿ ✦ ಜಿ. ವೀರಾರೆಡ್ಡಿ ✦ ಕೆ. ಶ್ರೀನಿವಾಸ ರೆಡ್ಡಿ
✦ ಆರ್.ತಿಮ್ಮಾರೆಡ್ಡಿ ✦ ಆರ್. ಹರೀಶ್ ರೆಡ್ಡಿ ✦ ಬಿ. ಸತೀಶ ಸ್ವಾಮಿ
✦ ಇಂಜಿನಿಯರ್ ದಿಲೀಪ್, ಪ್ರವೀಣ್, ಪ್ರತಾಪಸ್ವಾಮಿ

# ಶಿಕ್ಷಕರಿಗೆ ಆದ್ಯತೆ ಮೇರೆಗೆ ಲಸಿಕೆ ಹಾಕಲು ಒತ್ತಾಯ



ಹರಿಹರ, ಮೇ 26- ಕೋವಿಡ್ ಕರ್ತವ್ಯಕ್ಕೆ ನಿಯೋಜನೆ ಗೊಂಡಿರುವ ಶಿಕ್ಷಕರಿಗೆ ಆದ್ಯತೆ ಮೇರೆಗೆ ಲಸಿಕೆ ಹಾಕಲು ಹಾಗೂ ಸೂಕ್ತ ಸಲಕರಣೆಗಳನ್ನು ವಿತರಣೆ ಮಾಡಬೇಕೆಂದು ಆಗ್ರಹಿಸಿ, ಇಂದು ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪನವರಿಗೆ ಮನವಿ ನೀಡಿದರು.

ನಂತರ ಸಂಘದ ಪ್ರಧಾನ ಕಾರ್ಯದರ್ಶಿ ಶರಣಕುಮಾರ ಹೆಗಡೆ ಮಾತನಾಡಿ ಸರಕಾರ, ಜಿಲ್ಲಾಡಳಿತ, ತಾಲ್ಲೂಕು ಆಡಳಿತದ ಸೂಚನೆಯಂತೆ ಶಾಲಾ ಶಿಕ್ಷಕರು ವಿವಿಧ ಹಂತಗಳಲ್ಲಿ ಕೋವಿಡ್-19 ನಿಯಂತ್ರಣದ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದಾರೆ.

ಸರ್ಕಾರಿ ಆಸ್ಪತ್ರೆ, ಕೋವಿಡ್ ಕೇರ್ ಸೆಂಟರ್, ನಗರಸಭೆ, ಪುರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ, ಚೆಕ್ ಪೋಸ್ಟ್, ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿರುವ ಮತಗಟ್ಟೆ ಅಧಿಕಾರಿಗಳಾಗಿರುವ ಶಿಕ್ಷಕರು ಡಾಟಾ ಎಂಟ್ರಿ, ವಾರ್ ರೂ., ತನಿಖಾಧಿಕಾರಿ, ಯೋಗ ತರಬೇತಿ, ಪ್ರಾಥಮಿಕ, ದ್ವಿತೀಯ ಸಂಪರ್ಕಿತರ ಪತ್ತೆ ಕಾರ್ಯಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಶಿಕ್ಷಕರು ಭಾಗಿಯಾಗುತ್ತಿದ್ದಾರೆ. ಹಲವಾರು ಶಿಕ್ಷಕರು ಕೋವಿಡ್ ಸೋಂಕಿತರಾಗಿದ್ದಾರೆ.

ಸಂಘದ ಜಿಲ್ಲಾ ಉಪಾಧ್ಯಕ್ಷ ಚನ್ನಬಸಪ್ಪ, ತಾಲ್ಲೂಕು ಖಜಾಂಚಿ ರುದ್ರಪ್ಪ, ಸರ್ಕಾರಿ ನೌಕರರ ಸಂಘದ ನಿರ್ದೇಶಕರಾದ ಶಿವಮೂರ್ತಿ, ಮಂಜಪ್ಪ ಬಿದರಿ, ಸಿಆರ್‌ಪಿ ಕೆ.ಎನ್. ಬಸವರಾಜಯ್ಯ ಇನ್ನಿತರರಿದ್ದರು.


# 'ಬ್ಲ್ಯಾಕ್ ಫಂಗಸ್' ಕಾಯಿಲೆ ಅಥವಾ ಮ್ಯೂಕರ್‌ಮೈಕೋಸಿಸ್

ಮೂರು ದಿನಗಳ ಹಿಂದೆ ನಾನು ಕಾರ್ಯ ನಿರ್ವಹಿಸುತ್ತಿರುವ ವಿಭಾಗದಲ್ಲಿ ಆಯಾ ಆಗಿ ಕೆಲಸ ಮಾಡುತ್ತಿರುವವರೊಬ್ಬರು ಕೋವಿಡ್ ಲಸಿಕೆ ಬಗ್ಗೆ ಮಾಹಿತಿ ಪಡೆಯಲು ನನ್ನ ಬಳಿ ಬಂದರು. ತಡವಾಗಿ ಲಸಿಕೆ ತೆಗೆದುಕೊಳ್ಳುವ ಅವರ ನಿರ್ಧಾರಕ್ಕೆ ನಾನು ಕಾರಣ ಕೇಳಲಾಗಿ, ಆಕೆ ಈ ರೀತಿ ಉತ್ತರಿಸಿದರು. "ಅಮ್ಮ, ಒಂದು ವೇಳೆ ಕೊರೊನಾ ಬಂದರೂ ಸುಧಾರಿಸಿಕೊಳ್ಳಬಹುದೇನೋ .... ಆದರೆ ಅದೇನೋ ಬ್ಲ್ಯಾಕ್ ಫಂಗಸ್ ಅಂತ ಹೊಸ ಕಾಯಿಲೆ ಬಂದಿದೆಯಲ್ಲ..!! ಕೊರೊನಾ ಬಂದವರಲ್ಲಿ ಅದು ಬಹಳ ಬೇಗ ಬರುತ್ತಂತೆ. 'ಬ್ಲ್ಯಾಕ್ ಫಂಗಸ್' ಬಂದರೆ ಸಾವು ಗ್ಯಾರಂಟಿ ಅಂತ ಯಾರೋ ಹೇಳಿದ್ರಮ್ಮ... ಅದಕ್ಕೇ ಕೊರೊನಾ ಲಸಿಕೆ ತೆಗೆದುಕೊಳ್ಳಬೇಕು ಎಂದು ನಿರ್ಧರಿಸಿದ್ದೇನೆ". ಒಂದು ಕ್ಷಣ ನನ್ನ ಬಾಯಿಂದ ಮಾತೇ ಹೊರಡ ಲಿಲ್ಲ. ಹೌದು, ಹಲವಾರು ತಿಂಗಳುಗಳ ಹಿಂದೆ ಹಲವರ ಮನೆಯಲ್ಲಿ ಮರೆತುಬಿಟ್ಟ ಬ್ರೆಡ್ಡಿನ ತುಂಡಿನ ಮೇಲೆ ಬೆಳೆದು, ಆ ಅನುಪಯುಕ್ತ ಬ್ರೆಡ್ಡಿನ ಜೊತೆಗೇ ಸದ್ದಿಲ್ಲದೆ ಕಸದ ಬುಟ್ಟಿ ಸೇರುತ್ತಿದ್ದ ಫಂಗಸ್ ಈಗ ಪ್ರಪಂಚದಾದ್ಯಂತ ಸುದ್ದಿ ಮಾಡುತ್ತಿದೆ!! ಅದುವೇ ಬ್ಲ್ಯಾಕ್ ಫಂಗಸ್ ಕಾಯಿಲೆ. ಬನ್ನಿ ಇದರ ಬಗ್ಗೆ ವಿವರವಾಗಿ ತಿಳಿದುಕೊಳ್ಳೋಣ.

ನಮ್ಮ ಸುತ್ತಲಿನ ಪರಿಸರದಲ್ಲಿ ಜೀವಿಸುತ್ತಿರುವ ಕಣ್ಣಿಗೆ ಕಾಣದ ಅಸಂಖ್ಯಾತ ಸೂಕ್ಷ್ಮ ಜೀವಿಗಳಲ್ಲಿ ಶಿಲೀಂಧ್ರಗಳೂ (fungus)) ಇವೆ. ಅವುಗಳಲ್ಲಿ ಅನೇಕ ವರ್ಗಗಳಿವೆ. Zygomycota ಫೈಲಮ್‌ನ ಅಡಿಯಲ್ಲಿ ಬರುವ Zygomycetes ವರ್ಗದಲಿ mucorales ಗುಂಪಿಗೆ

**ರೋಗದಿಂದ ಬೇಗ ಚೇತರಿಸಿಕೊಳ್ಳಲು / ತಡೆಗಟ್ಟಲು**

| | ಇವುಗಳನ್ನು ಮಾಡಿ | ಇವುಗಳನ್ನು ಮಾಡಬೇಡಿ |
|---|---|---|
| 1 | ತಡಮಾಡದೇ ವೈದ್ಯರಲ್ಲಿ ತೋರಿಸಿ | ವೈದ್ಯರ ಸಲಹೆ ಮೀರುವುದು |
| 2 | ಸಕ್ಕರೆ ಕಾಯಿಲೆ ಇದ್ದಲ್ಲಿ ವೈದ್ಯರಿಗೆ ತಿಳಿಸಿ | ಸ್ವಯಂ ವೈದ್ಯ |
| 3 | ನಿಯಮಿತವಾಗಿ ಸಕ್ಕರೆ ಪರೀಕ್ಷೆ ಮಾಡಿಸಿಕೊಳ್ಳಿ | ಪ್ರಾರಂಭಿಕ ಹಂತದಲ್ಲಿ ನಿರ್ಲಕ್ಷತೆ |
| 4 | ದೈಹಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಿ | ಒಂದೇ ಮಾಸ್ಕನ್ನು ಹಲವು ದಿನಗಳ ಕಾಲ ಧರಿಸುವುದು. |
| 5 | ಚಿಕಿತ್ಸೆಯ ಸಂಪೂರ್ಣ ಕೋರ್ಸ್ ತೆಗೆದುಕೊಳ್ಳಿ | |
| 6 | ಸ್ವಚ್ಛವಾದ ಮಾಸ್ಕ್ ಧರಿಸಿ | |
| 7 | ಪರಿಸರದ ಸ್ವಚ್ಛತೆ, ಶುದ್ಧ ನೀರಿನ ಬಳಕೆ ಅತ್ಯವಶ್ಯಕ. | |





ಸೇರಿದ ಶಿಲೀಂಧ್ರಗಳು ಮನುಷ್ಯರಲ್ಲಿ ಉಂಟು ಮಾಡುವ ಕಾಯಿಲೆಗೆ 'ಬ್ಲ್ಯಾಕ್ ಫಂಗಸ್' ಎನ್ನುತ್ತಾರೆ. ಇದನ್ನು ವೈದ್ಯಕೀಯ ಭಾಷೆಯಲ್ಲಿ 'ಮ್ಯೂಕರ್‌ಮೈಕೋಸಿಸ್ (Mucormycosis)' ಎಂದು ಕರೆಯಲಾಗಿದೆ. ಒಟ್ಟಾರೆ 11 ತಳಿಗಳು ಮತ್ತು 27 ಜಾತಿಯ ಮ್ಯೂಕೋರೇಲ್‌ಗಳು ಕಾಯಿಲೆಗೆ ಕಾರಣವಾಗುತ್ತವೆ. ಭಾರತದಲ್ಲಿ ಸಾಮಾನ್ಯವಾಗಿ ಕಾಯಿಲೆಯನ್ನು ಉಂಟುಮಾಡುವ ಪ್ರಭೇದಗಳೆಂದರೆ Rhizopus arrhizus ನಂತರ Apophysomyces species, Lichtheimia species, Sakseraea species, Cunninghamella species, Mucor species, Rhizomucor species ಮತ್ತು Syncephalastrum species. ಈ ಶಿಲೀಂಧ್ರಗಳ ಬೀಜಕಗಳು ನಮ್ಮ ಸುತ್ತಮುತ್ತಲಿನ ಗಾಳಿ, ನೀರು, ದೂಳು, ಮಣ್ಣು ಇವುಗಳಲ್ಲಿ ನಿರಂತರವಾಗಿರುತ್ತವೆ.

**ಮ್ಯೂಕರ್‌ಮೈಕೋಸಿಸ್‌ನ ಪ್ರಕಾರಗಳು:**

✧ ಮೂಗು, ಕಣ್ಣು ಮತ್ತು ಮೆದುಳಿನ ಮ್ಯೂಕರ್‌ಮೈಕೋಸಿಸ್
✧ ಶ್ವಾಸಕೋಶದ ಮ್ಯೂಕರ್‌ಮೈಕೋಸಿಸ್
✧ ಚರ್ಮದ ಮ್ಯೂಕರ್‌ಮೈಕೋಸಿಸ್
✧ ಜೀರ್ಣಾಂಗವ್ಯೂಹದ ಮ್ಯೂಕರ್‌ಮೈಕೋಸಿಸ್
✧ ಕಿಡ್ನಿ ಅಥವಾ ಮೂತ್ರಪಿಂಡದ ಮ್ಯೂಕರ್‌ಮೈಕೋಸಿಸ್
✧ ಇತರ ಅನೇಕ ಅಂಗಗಳ ಪ್ರಸಾರವಾದ ಮ್ಯೂಕರ್‌ಮೈಕೋಸಿಸ್.



ಡಾ|| ಉಷಾ. ಎಂ.ಜಿ.
ಪ್ರಾಧ್ಯಾಪಕರು,
ಮೈಕ್ರೋಬಯಾಲಜಿ ವಿಭಾಗ
ಜೆ.ಜೆ.ಎಮ್. ಮೆಡಿಕಲ್ ಕಾಲೇಜು, ದಾವಣಗೆರೆ.

**ಮ್ಯೂಕರ್‌ಮೈಕೋಸಿಸ್ ಕಾಯಿಲೆ ಹರಡುವಿಕೆ:**

ಪರಿಸರದಲ್ಲಿರುವ ಶಿಲೀಂಧ್ರಗಳ ಬೀಜಕಗಳನ್ನು
✧ ಉಸಿರಿನ ಮೂಲಕ ಒಳಗೆಳೆದುಕೊಳ್ಳುವುದರಿಂದ
✧ ಬಾಯಿಯ ಮುಖಾಂತರ ಸೇವಿಸುವುದರಿಂದ
✧ ಶಿಲೀಂಧ್ರಅಥವಾ ಅದರ ಬೀಜಕಗಳೊಂದಿಗೆ ಚರ್ಮದ ಸಂಪರ್ಕ

ಹೀಗೆ ನಮ್ಮ ದೇಹವನ್ನು ಸೇರಿದ ಈ ಶಿಲೀಂಧ್ರಗಳು ರಕ್ತನಾಳಗಳ ಮೇಲೆ ಆಕ್ರಮಣ ಮಾಡುವುದರಿಂದ ರಕ್ತ ಗಂಟಾಗಿ ಸರಾಗವಾಗಿ ಹರಿಯದೇ ಆ ಭಾಗ ಕ್ಷೀಣಗೊಂಡು, ಕೊಳೆಯುತ್ತದೆ. ಈ ಹಂತದಲ್ಲಿ ಕಾಯಿಲೆಗೆ ತುತ್ತಾದ ಭಾಗ ಅಥವಾ ಚರ್ಮ ಕಪ್ಪಾಗುವುದರಿಂದ ಇದನ್ನು 'ಬ್ಲ್ಯಾಕ್ ಫಂಗಸ್' ಎಂದು ಕರೆಯಲಾಗುತ್ತದೆ. ಈ ಕಾಯಿಲೆ ಒಬ್ಬರಿಂದ ಮತ್ತೊಬ್ಬರಿಗೆ (3ನೇ ಪುಟಕ್ಕೆ)

## ಹೆಚ್.ಎಸ್. ದೊರೆಸ್ವಾಮಿ ನಿಧನ

**(1ನೇ ಪುಟದಿಂದ)** ಹಾರೋಹಳ್ಳಿ ಶ್ರೀನಿವಾಸಯ್ಯ ದೊರೆಸ್ವಾಮಿ ಅವರು ಏಪ್ರಿಲ್ 10, 1918ರಲ್ಲಿ ಜನಿಸಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಅವರು, ಬ್ರಿಟಿಷರ ಕಾಲದಲ್ಲಿ ಕನ್ನಡದ ಜನಪ್ರಿಯ ಪತ್ರಿಕೆ ಎನಿಸಿದ್ದ 'ಪೌರವಾಣಿ' ವರದಿಗಾರರಾಗಿದ್ದರು. ಅಂದಿನ ಮೈಸೂರು ಪ್ರಾಂತ್ಯದಲ್ಲಿದ್ದ ಕನಕಪುರ ತಾಲ್ಲೂಕು ಹಾರೋಹಳ್ಳಿ ದೊರೆಸ್ವಾಮಿ ಅವರ ಜನ್ಮಸ್ಥಳ. ಕೇವಲ 5 ವರ್ಷದವರಿದ್ದಾಗ ತಮ್ಮ ತಂದೆ-ತಾಯಿಯನ್ನು ಕಳೆದುಕೊಂಡಿದ್ದರು. ಜೂನ್ 1942ರಲ್ಲಿ ಬೆಂಗಳೂರಿನ ಪ್ರೌಢಶಾಲೆಯಲ್ಲಿ ಗಣಿತ ಮತ್ತು ವಿಜ್ಞಾನ ಶಿಕ್ಷಕರಾಗಿ ವೃತ್ತಿ ಆರಂಭಿಸಿದರು. ಅದೇ ವರ್ಷ ಆಗಸ್ಟ್ ತಿಂಗಳಲ್ಲಿ ಆರಂಭವಾದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸಕ್ರಿಯರಾಗಿ ಪಾಲ್ಗೊಂಡರು. ಬ್ರಿಟಿಷರ ಆಡಳಿತಕ್ಕೆ ಧಕ್ಕೆ ತರುವ ಉದ್ದೇಶದಿಂದ ದಾಖಲೆಗಳನ್ನು ಸುಟ್ಟು ಹಾ ಕಲೆಂದು ಪೋಸ್ಟ್‌ಬಾಕ್ಸ್‌ಗಳು ಮತ್ತು ರೆಕಾರ್ಡ್ ರೂಮ್‌ಗಳಲ್ಲಿ ಟೈಮ್ ಬಾಂಬ್‌ಗಳನ್ನು ಸ್ಫೋಟಿಸಿದ್ದರು. ಕಾರ್ಮಿಕ ಚಳವಳಿಗಳಲ್ಲೂ ಸಕ್ರಿಯರಾಗಿ ಪಾಲ್ಗೊಂಡಿದ್ದರು.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಆಟೋ, ಟ್ಯಾಕ್ಸಿ ಮತ್ತು ಮ್ಯಾಕ್ಸಿಕ್ಯಾಬ್ ಚಾಲಕರುಗಳಿಗೆ ಸರ್ಕಾರದ ಪರಿಹಾರ ನಿಧಿಗೆ ಅರ್ಜಿ ಹಾಕಲಾಗುವುದು.**
ಸಂಪರ್ಕಿಸಿ :
98449 69738

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ದಿ.ಕೂರಿಪೇಲ ರಾಮಕೃಷ್ಣರಾವ್ ಇವರ ಜ್ಞಾಪಕಾರ್ಥವಾಗಿ ಡಾ. ಶ್ರೀನಿವಾಸ್‌ರಾವ್ ಅಮೆರಿಕ ಇವರ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಮನೆಗಳು ಮಾರಾಟಕ್ಕಿವೆ**
40x60 North, 3 ಬೆಡ್ ರೂಮ್ ಮನೆ ಕುವೆಂಪು ಬಡಾವಣೆಯಲ್ಲಿ, 30x40 North ಕೆ.ಹೆಚ್.ಬಿ ಯಲ್ಲಿ 34 ಲಕ್ಷಕ್ಕೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
93410 14130
99166 12110

**ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ದಾಟಿ ಹೊಸ ಬನಶಂಕರಿ ಲೇಔಟ್‌ನಲ್ಲಿ**
30x48 East, 30x50 west, 42x60 East, 30x57 30x57 East, ಅಕ್ಕ-ಪಕ್ಕ, 30x40 West, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ (ಇಂಡಿಪೆಂಡೆಂಟ್)**
1) ಎಸ್.ಎಸ್. 'ಬಿ' ಉತ್ತರ 2 BHK
2) ಎಂ.ಸಿ.ಸಿ. 'ಬಿ' ಬ್ಲಾಕ್ 3 BHK
3) ವಿದ್ಯಾನಗರ 2 BHK
ಕಿರಣ್ ಬೂಸ್ನೂರ್ : 98440-63409
(ಮನೆ ಬಾಡಿಗೆಗೆ, ಲೀಸ್ ಗೆ ಬೇಕೇ ? ವಿಚಾರಿಸಿ)

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಕೆಲಸದ ಸಮಯ : ಬೆ. 8 ರಿಂದ 11ರವರೆಗೆ.
ಸಂಪರ್ಕಿಸಿ :ಡೋ.ನಂ. 2007/1, ಎಂಸಿಸಿ ಎ ಬ್ಲಾಕ್, 1ನೇ ಮೇನ್, 1ನೇ ಕ್ರಾಸ್, ಡಾ. ಎಂ.ಸಿ. ಮೋದಿ ರಸ್ತೆ, ದಾವಣಗೆರೆ.
94481 10895

**Land Requierd @ Rs 5 Laks/ Acre**
74112 50447

**Online ಯೋಗ ಕ್ಲಾಸ್**
ಪ್ರತಿನಿತ್ಯ ಯೋಗಾಸನ, ಸೂರ್ಯ ನಮಸ್ಕಾರ, ಪ್ರಾಣಾಯಾಮ, ಧ್ಯಾನದ ಆನ್‌ಲೈನ್ (Online) ತರಗತಿಗಳಿಗೆ ಸಂಪರ್ಕಿಸಿರಿ.
ದಿವ್ಯ ಯೋಗ ಮಂದಿರ, ದಾವಣಗೆರೆ.
99726 00713

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಜಮೀನು ಬೇಕಾಗಿರುತ್ತದೆ**
ಬಾತಿ, ನಂದಿತಾವರೆ, ದೇವರಬೆಳಕೆರೆ
74112 50447

# ಕೃಷಿ ಕಾಯ್ದೆ ವಿರೋಧಿಸಿ ಎಸ್‌ಎಫ್‌ಐನಿಂದ ಬ್ಲಾಕ್ ಡೇ



ಜಗಳೂರು


ಜಗಳೂರು, ಮೇ 26- ರಾಷ್ಟ್ರವ್ಯಾಪಿ ಬ್ಲಾಕ್ ಡೇ (ಕರಾಳ ದಿನ) ಆಚರಣೆಗೆ ಕರೆ ಕೊಟ್ಟ ಭಾಗವಾಗಿ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಾದ ರಸ್ತೆ ಮಾಚಿಕೆರೆ, ಮಾಳಮ್ಮನ ಹಳ್ಳಿ, ತಮಲೇಹಳ್ಳಿ, ಸಿದ್ದಿಹಳ್ಳಿ ಮತ್ತು ಗೌಡಗೊಂಡನಹಳ್ಳಿಯಲ್ಲಿ ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ಸಂಘಟನೆಗಳಿಂದ ಪೋಸ್ಟರ್ ಹಿಡಿದು ಪ್ರತಿಭಟನೆ ನಡೆಸಲಾಯಿತು ಎಂದು ಎಸ್‌ಎಫ್‌ಐ ಜಿಲ್ಲಾ ಸಂಚಾಲಕ ಅನಂತರಾಜ್ ತಿಳಿಸಿದರು.

ಜನ ವಿರೋಧಿ ಕೃಷಿ ಕಾನೂನುಗಳು ಮತ್ತು ನಾಲ್ಕು ಕಾರ್ಮಿಕ ವಿರೋಧಿ ಕಾನೂನುಗಳನ್ನು ವಾಪಸ್ ಪಡೆಯಲು ಒತ್ತಾಯಿಸಿ, ನಡೆಸುತ್ತಿರುವ ರೈತರ ಐತಿಹಾಸಿಕ ಹೋರಾಟವು ಇಂದು ಮೇ 26 ಕ್ಕೆ 6 ತಿಂಗಳು ಪೂರ್ಣಗೊಳ್ಳಲಿದೆ. ಟ್ರೇಡ್ ಯೂನಿಯನ್‌ಗಳ ಅಖಿಲ ಭಾರತ ಮುಷ್ಕರವೂ 6 ತಿಂಗಳುಗಳನ್ನು ಪೂರ್ತಿಗೊಳಿಸುತ್ತಿದೆ.

ಜೊತೆಗೆ ದೇಶದಲ್ಲಿ ಮಾರಣಾಂತಿಕ ಕೋವಿಡ್ ಸೋಂಕು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತೀವ್ರವಾಗಿ ಹೆಚ್ಚುತ್ತಿದ್ದು, ಜನ ಸಾಮಾನ್ಯರು ಸಮರ್ಪಕ ಚಿಕಿತ್ಸೆ ಸಿಗಲಾರದೇ ಸಾವೀಗೀಡಾಗುತ್ತಿದ್ದಾರೆ. ಇನ್ನೊಂದೆಡೆ ಸರ್ಕಾರಗಳು ತಮ್ಮ ವೈಫಲ್ಯ ಮುಚ್ಚಿಕೊಳ್ಳುವ ಸಲುವಾಗಿ ಬೇಕಾಬಿಟ್ಟಿ ಲಾಕ್‌ಡೌನ್ ಘೋಷಿಸಿದ್ದು, ಹಸಿವಿನಿಂದ ಜನತೆ ಸಾಯುವಂತಾಗಿದೆ. ಜನರು ಇದ್ದ ದುಡಿಮೆಯನ್ನು ಕಳೆದುಕೊಂಡು ಅತ್ಯಂತ ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

ದೇಶವ್ಯಾಪಿ ಪ್ರತಿಭಟನೆಯ ಭಾಗವಾಗಿ ಇಂದು ಕರ್ನಾಟಕ ರಾಜ್ಯವ್ಯಾಪಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿ-ಯುವಜನ-ಮಹಿಳೆಯರು, ರೈತ-ಕಾರ್ಮಿಕರು ಹಾಗೂ ಜನ ಸಾಮಾನ್ಯರೆಲ್ಲರೂ ಮನೆ ಮನೆ ಎದುರು ಬ್ಲಾಕ್ ಡೇ ಘೋಷಣೆಯ ಪ್ರತಿಭಟನೆ ನಡೆಸಿ, ಬೇಡಿಕೆಗಳನ್ನು ಕೂಡಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಡೇರಿಸಲು ಮುಂದಾಗಬೇಕು. ಇಲ್ಲವಾದಲ್ಲಿ ರಾಷ್ಟ್ರವ್ಯಾಪಿ ತೀವ್ರವಾದ ಹೋರಾಟಕ್ಕೆ ಜನತೆ ಮುಂದಾಗಬೇಕಾಗುತ್ತ ದೆಂದು ಎಸ್‌ಎಫ್‌ಐ, ಡಿವೈಎಫ್‌ಐ, ಎಐಡಿಡಬ್ಲ್ಯುಎ, ಕರ್ನಾಟಕ ರಾಜ್ಯ ಸಮಿತಿಗಳು ಆಗ್ರಹಿಸಿವೆ.

## ಬುದ್ಧ...



ವೈಶಾಖ ಶುದ್ಧ
ಪೂರ್ಣಿಮೆ ಅಂದು
ಏಷ್ಯಾದ ಬೆಳಕು
ತಾಗಿತು ಭೂಮಿಗೆ
ಬಂದು ಹೆಸರಿಸಿದರು ಸಿದ್ದಾರ್ಥನೆಂದು
ಜಗವ ಬೆಳಗಲು ಬಂದನು ನಿಂದು

ಅರಳಿ ವೃಕ್ಷದಡಿ ಮಾಡಿದ ಧ್ಯಾನ
ಪಡೆದನವ ನಿಜವಾದ ಜ್ಞಾನ
ಸಾರಿದರು ದುಃಖಕ್ಕೆ ಮೂಲ ಆಸೆ
ಪಾಲಿಸಬೇಕೆಂದು ಅಹಿಂಸೆ

ತಥಾಗಥ, ಶಾಕ್ಯ ಮುನಿ ಹಲವು ವಿಶೇಷಣ
ಜೀವನದ ಮೋಕ್ಷಕ್ಕೆ ತೋರಿದರು ಅಷ್ಟ
ಮಾರ್ಗವನ್ನ ಜಗದ ಕಷ್ಟಗಳ ನಿವಾರಿಸಿದ
ವೈದ್ಯಗುರು

ಬೌದ್ಧ ಧರ್ಮವ ಸ್ಥಾಪಿಸಿದ ಬುದ್ಧಗುರ

ಹುಟ್ಟಿ ಬಾ ಓ ಪೂರ್ಣಿಮೆಯ ಬೆಳಕೇ
ಕಷ್ಟದಿಂದ ನಲುಗುತಿಹ ಈ ಜಗಕೆ
ನೀಡು ನಮ್ಮ ಬಾಳಿಗೆ ಶಾಂತಿ, ಅರಳಿಸು
ಎಲ್ಲರ ಹೃದಯದಲ್ಲಿ ವಾತ್ಸಲ್ಯ ಪ್ರೀತಿ

ನೀ ನೀಡಿದ ನೀತಿ ಕಥೆಗಳ ಸಂದೇಶ ಮರೆತು
ಬಾಳುತ್ತಿದೆ ಮನುಕುಲವು ತನ್ನ ನೋವು...

- ಬಸವರಾಜ್ ಕರುವಿನ

# ದೇವರಬೆಳಕೆರೆ ಮೊರಾರ್ಜಿ ಶಾಲೆಯನ್ನು ಸಿಸಿ ಸೆಂಟರ್ ಮಾಡಲು ಪರಿಶೀಲನೆ



**ಹರಿಹರ ತಾಲ್ಲೂಕಿನಲ್ಲಿ 126 ಜನರಿಗೆ ಸೋಂಕು**

ಮಲೇಬೆನ್ನೂರು, ಮೇ 26- ಗ್ರಾಮೀಣ ಪ್ರದೇಶದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮತ್ತು ಸೋಂಕಿತರನ್ನು ಹೋಂ ಕ್ವಾರಂಟೈನ್ ಮಾಡದೇ ಕೋವಿಡ್ ಕೇರ್ ಸೆಂಟರ್‌ಗಳಿಗೆ ಕರೆ ತರಬೇಕೆಂಬ ಸರ್ಕಾರದ ನಿರ್ದೇಶನ ಬಿಗಿಗೊಳ್ಳುತ್ತಿರುವುದರಿಂದ ದೇವರಬೆಳಕೆರೆ ಮೊರಾರ್ಜಿ ಶಾಲೆಯನ್ನು ಕೋವಿಡ್ ಕೇರ್ ಸೆಂಟರ್ ಮಾಡಲು ನಿರ್ಧರಿಸಲಾಯಿತು.

ಇಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಜಿಲ್ಲಾ ಮಲೇರಿಯಾ ಅಧಿಕಾರಿ ಹಾಗೂ ತಾಲ್ಲೂಕು ಕೋವಿಡ್ ನೋಡಲ್ ಅಧಿಕಾರಿಗಳೂ ಆದ ಡಾ. ನಟರಾಜ್, ಉಪತಹಶೀಲ್ದಾರ್ ಆರ್. ರವಿ, ಮಲೇಬೆನ್ನೂರು ಪುರಸಭೆ ಮುಖ್ಯಾಧಿಕಾರಿ ದಿನಕರ್ ನೇತೃತ್ವದ ಅಧಿಕಾರಿಗಳ ತಂಡವು ದೇವರಬೆಳಕೆರೆ ಗ್ರಾಮದಲ್ಲಿರುವ ಮೊರಾರ್ಜಿ ವಸತಿ ಶಾಲೆಗೆ ಭೇಟಿ ನೀಡಿ, ಅಲ್ಲಿರುವ ಸೌಲಭ್ಯಗಳನ್ನು ಪರಿಶೀಲಿಸಿದರು.

ಈಗಾಗಲೇ ಗುತ್ತೂರಿನಲ್ಲಿರುವ ಕೇರ್ ಸೆಂಟರ್‌ನಲ್ಲಿ 142 ಜನ ಮತ್ತು ಹರಿಹರದ ಎಸ್‌ಜೆವಿಪಿ ಕೋವಿಡ್ ಕೇರ್ ಸೆಂಟರ್‌ನಲ್ಲಿ 140 ಜನ ಹಾಗೂ ಕೊಂಡಜ್ಜಿಯ ಮೊರಾರ್ಜಿ ಸೆಂಟರ್‌ನಲ್ಲಿ 10 ಜನ ಸೋಂಕಿತರನ್ನು ಆರೈಕೆ ಮಾಡಲಾಗುತ್ತಿದೆ. ಮಲೇಬೆನ್ನೂರು ಭಾಗದಿಂದ ಹೊಸ ಸೋಂಕಿತರು ಪತ್ತೆಯಾದರೆ, ಅವರ ಅನುಕೂಲಕ್ಕಾಗಿ ದೇವರಬೆಳಕೆರೆ ಮೊರಾರ್ಜಿ ಶಾಲೆಯಲ್ಲಿ ಸಿ.ಸಿ. ಸೆಂಟರ್ ತೆರೆಯಲು ಸಿದ್ಧತೆ ಕೈಗೊಳ್ಳಲಾಗುವುದೆಂದು ತಹಶೀಲ್ದಾರ್ ರಾಮಚಂದ್ರಪ್ಪ 'ಜನತಾವಾಣಿ'ಗೆ ತಿಳಿಸಿದರು.

ತಾಲ್ಲೂಕು ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ಕಂದಾಯ ನಿರೀಕ್ಷಕ ಸಮೀರ್, ಪಿಡಿಓ ಬಿರಾದಾರ್, ಗ್ರಾಮಲೆಕ್ಕಾಧಿಕಾರಿ ಪುಷ್ಪಾ ದೊಡ್ಮನಿ, ಆರೋಗ್ಯ ಸಹಾಯಕ ಪರಶುರಾಮ್, ಗ್ರಾಮ ಸಹಾಯಕ ರುದ್ರಪ್ಪ ಹಾಜರಿದ್ದರು.

**126 ಜನರಿಗೆ ಸೋಂಕು:** ಹರಿಹರ ತಾಲ್ಲೂಕಿನಲ್ಲಿ ಇಂದಿನ ಬೆಳಿಗಿನ ವರದಿ ಪ್ರಕಾರ 126 ಜನರಿಗೆ ಸೋಂಕು ದೃಢಪಟ್ಟಿದ್ದು, ಸಂಜೆ ವೇಳೆಗೆ ರ್‍ಯಾಪಿಡ್ ಟೆಸ್ಟ್‌ನಲ್ಲಿ 30 ಕ್ಕೂ ಹೆಚ್ಚು ಜನರಿಗೆ ಪಾಸಿಟಿವ್ ಬಂದಿದೆ. ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು 25 ಜನರಿಗೆ ಕೋವಿಡ್ ಟೆಸ್ಟ್ ಮಾಡಲಾಗಿದ್ದು, 14 ಜನರಿಗೆ ಪಾಸಿಟಿವ್ ಬಂದಿದೆ. ಪಟ್ಟಣದ ಬಸವೇಶ್ವರ ಬಡಾವಣೆಯ 55 ವರ್ಷದ ಮಹಿಳೆ ಮತ್ತು 34 ವರ್ಷದ ಯುವಕ ಕೊರೊನಾ ಸೋಂಕಿಗೆ ಬಲಿಯಾಗಿದ್ದಾರೆ.

## ಕೊರೊನಾ ವಾರಿಯರ್ಸ್

**(1ನೇ ಪುಟದಿಂದ)** ಪಂಚಾಯಿತಿ ಅಧ್ಯಕ್ಷರಿಗೆ ಸೂಚಿಸಿ ದರು. ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮೀಣಾ ಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರು, ಕೋವಿಡ್ 19 ಮೊದಲ ಅಲೆ ಯಶಸ್ವಿಯಾಗಿ ನಿಯಂತ್ರಿಸುವಲ್ಲಿ ಗ್ರಾಮ ಪಂಚಾಯತ್ ಟಾಸ್ಕ್ ಫೋರ್ಸ್‌ಗಳು ಮಹತ್ವದ ಪಾತ್ರ ವಹಿಸಿವೆ. ಇದೀಗ ಎರಡನೇ ಅಲೆಯನ್ನೂ ನಿಯಂತ್ರಿಸುವಲ್ಲಿ ಈ ಟಾಸ್ಕ್ ಫೋರ್ಸ್ ಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದರು.

## ಪ್ರಾಣಿಗಳಿಗೆ ಅನ್ನದಾತ ನಮ್ಮ ದಾವಣಗೆರೆ ತಂಡ









**(1ನೇ ಪುಟದಿಂದ)** ರೋಹಿತ್.

ಅಂದ ಹಾಗೆ ಸಾಮಾಜಿಕ ಜಾಲತಾಣವನ್ನು ಕೇವಲ ಮನರಂಜನೆಗಷ್ಟೇ ಬಳಸಿಕೊಳ್ಳುವ ಬದಲು ಸಂಕಷ್ಟದ ಸಮಯದಲ್ಲಿ ಜನತೆಗಷ್ಟೇ ಅಲ್ಲ, ಪ್ರಾಣಿ-ಪಕ್ಷಿಗಳಿಗೂ ಸಹಾಯ ಮಾಡಬಹುದು ಎಂಬುದನ್ನು ಈ ತಂಡ ತೋರಿಸಿಕೊಡುವ ಮೂಲಕ ಮಾದರಿಯಾಗಿದೆ.

ತಂಡದಲ್ಲಿ ರೋಹಿತ್ ಎಸ್.ಜೈನ್ ಅವರೊಂದಿಗೆ ವೃಷಭ್, ನಿಖಿಲ್, ಶಿವಯೋಗಿ, ಸುನಿಲ್ ಬಾಗೇವಾಡಿ, ದೀಪಕ್ ಎನ್., ಬಾಬು ಸುಬ್ರಹ್ಮಣ್ಯ, ನಿಹಾಲ್ ಸೋನಿ, ಎಂ.ಬಿ. ದೇವಿಕಾ, ಆಶಿಶ್ ಜೈನ್, ವಿವೇಕ್ ಜೈನ್, ಆನಂದ್ ಜೈನ್, ಸುಮತಿ ತಳವಾರ್, ಸಮೀರ್ ಟಕ್ಕರ್, ಪ್ರಕಾಶ್ ಸೇವೆಯಲ್ಲಿ ನಿರತರಾಗಿದ್ದಾರೆ.

## ಜಗಳೂರು : ವಿದ್ಯುತ್ ಬಿಲ್ ಮನ್ನಾ ಮಾಡಲು ಮನವಿ



ಜಗಳೂರು, ಮೇ 26- ಕೊರೊನಾ ಸಂಕಷ್ಟದಲ್ಲಿರುವ ಜನಸಾಮಾನ್ಯರಿಗೆ ವಿದ್ಯುತ್ ಬಿಲ್ ಹೊರೆಯಾಗುತ್ತಿದ್ದು, ಏಪ್ರಿಲ್ 21 ರಿಂದ ಮೇ 21 ರ ವರೆಗಿನ ವಿದ್ಯುತ್ ಬಿಲ್ ಮನ್ನಾ ಮಾಡಬೇಕು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮದ್ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಜಗಳೂರು ಬೆಸ್ಕಾಂ ಇಲಾಖೆ ಮುಖಾಂತರ ಮನವಿ ಸಲ್ಲಿಸಿದ ಅವರು, ಕೊರೊನಾ ಲಾಕ್‌ಡೌನ್‌ನಿಂದಾಗಿ ಉದ್ಯೋಗವಿಲ್ಲದೆ ಮನೆಯಲ್ಲಿ ಉಳಿಯುವಂತಾಗಿದೆ. ಬಡಜನರು, ಕೂಲಿ ಕಾರ್ಮಿಕರು ಹಾಗು ಬಿಪಿಎಲ್ ಕುಟುಂಬಗಳಿಗೆ ಇದರ ಹೊರೆ ಇಳಿಸಬೇಕು ಅಥವಾ ವಿದ್ಯುತ್ ಬಿಲ್ ಪಾವತಿಸಲು ಆರ್ಥಿಕ ಪರಿಸ್ಥಿತಿ ಸುಧಾರಿಸಲು ಕನಿಷ್ಟ ಮೂರು ತಿಂಗಳು ಕಾಲಾವಕಾಶ ನೀಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

# ನಾಯಕತ್ವ: ಪಕ್ಷದ ನಿರ್ಧಾರಕ್ಕೆ ಬದ್ಧ

**(1ನೇ ಪುಟದಿಂದ)** ಪರಿಗಣಿಸಿ, ನಿಮ್ಮನ್ನು ಮುಖ್ಯಮಂತ್ರಿಯನ್ನಾಗಿ ವರಿಷ್ಠರು ನೇಮಕ ಮಾಡಿದ್ದರು ಎಂಬುದನ್ನು ಮಾತುಕತೆ ಸಂದರ್ಭದಲ್ಲಿ ಮುಕುಂದಜೀ ಅವರು ಯಡಿಯೂರಪ್ಪನವರ ಗಮನಕ್ಕೆ ತಂದಿದ್ದಾರೆ.

ನಿಮಗೆ ಪಕ್ಷ ನೀಡಿದ್ದ ಅವಧಿ ಮುಗಿಯುತ್ತಾ ಬಂದಿದೆ. ಪಕ್ಷದ ಆದೇಶಕ್ಕೆ ತಲೆಬಾಗಿ ಅಧಿಕಾರದಿಂದ ಗೌರವಿತವಾಗಿ ನಿರ್ಗಮಿಸಿ. ಪಕ್ಷ ನಿಮ್ಮನ್ನು ಮುಂದೆ ಗೌರವಿತವಾಗಿ ನಡೆಸಿಕೊಳ್ಳುತ್ತದೆ ಎಂಬ ಭರವಸೆಯನ್ನು ಮುಕುಂದ ಅವರು ನೀಡಿದ್ದಾರೆ.

ಯಾವುದೇ ಷರತ್ತುಗಳನ್ನು ಪಕ್ಷದ ಮುಂದೆ ಇಡಬೇಡಿ. ನಿಮ್ಮ ಪುತ್ರ ವಿಜಯೇಂದ್ರ ರಾಜಕೀಯವಾಗಿ ಬೆಳೆಯಲು ಇನ್ನೂ ಸಮಯವಿದೆ. ಆತುರು ಮತ್ತು ದುಡುಕು ನಿರ್ಧಾರಗಳು ಬೇಡ. ಆತನಿಗೂ ಪಕ್ಷದಲ್ಲಿ ಉಜ್ವಲ ಭವಿಷ್ಯವಿದೆ ಎಂಬುದನ್ನು ಮುಕುಂದ್ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾರೆ.

ಪಕ್ಷ ಮುಂದೆ ನಿಮಗೆ ಏನು ಆದೇಶ ನೀಡುತ್ತದೆಯೋ ಅದರಂತೆ ನಡೆದುಕೊಳ್ಳಿ. ಪರ್ಯಾಯ ಅಧಿಕಾರ ನೀಡಿದರೆ, ಅದನ್ನೂ ಸ್ವೀಕರಿಸಿ ಎಂದಿದ್ದಾರೆ.

ಮುಕುಂದಜೀ ಅವರ ಮಾತುಗಳಿಗೆ ಮನ್ನಣೆ ನೀಡಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ನಾನು ಪಕ್ಷದಿಂದ ಹೊರ ಹೋಗಿ, ಒಳಗೆ ಬಂದ ನಂತರವೂ ಅಧಿಕಾರ ನೀಡಿದ್ದೀರಿ. ಅದನ್ನು ನಾನು ಮರೆಯುವುದಿಲ್ಲ. ನನ್ನ ಪುತ್ರ ವಿಜಯೇಂದ್ರನ ಬೆಳವಣಿಗೆಯ ಬಗ್ಗೆಯು ನಾನು ದೂರದೃಷ್ಟಿ ಇಟ್ಟುಕೊಂಡಿದ್ದೇನೆ. ಆತನಿಗೆ ಅಧಿಕಾರ ನೀಡುವ ವಿಚಾರ ನಿಮಗೆ ಬಿಡುತ್ತೇನೆ. ಮುಂದೆ ಪಕ್ಷದ ಹಿತ ದೃಷ್ಟಿಯಿಂದ ಕೆಲವು ಸಲಹೆಗಳನ್ನು ನೀಡಿದರೆ ಪರಿಶೀಲಿಸಿ ಎಂದಿದ್ದಾರೆ.

ಮುಕುಂದಜೀ ಅವರ ಭೇಟಿಯ ನಂತರ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಅವರನ್ನು ಸಂಪರ್ಕಿಸಿ, ಮುಖ್ಯಮಂತ್ರಿಯವರು ಚರ್ಚೆ ಮಾಡಿದ್ದಾರೆ.

ಈ ಮಧ್ಯೆ ಉಪಮುಖ್ಯಮಂತ್ರಿ ಅಶ್ವತ್ಥ ನಾರಾಯಣ್‌ಗೆ ಪಕ್ಷವೇ ಹೆಚ್ಚು ಅಧಿಕಾರವನ್ನು ನೀಡಿ, ಕೋವಿಡ್ ವಿರುದ್ಧ ಹೋರಾಡಲು ಹೊಣೆಗಾರಿಕೆಯನ್ನು ಅವರಿಗೆ ನೀಡಿದೆ. ಅಷ್ಟೇ ಅಲ್ಲದೆ ಅಶ್ವತ್ಥ ನಾರಾಯಣ್ ಅವರ ಆದೇಶಗಳನ್ನು ಅಧಿಕಾರಿಗಳು ಪಾಲಿಸಬೇಕೆಂದು ಕೇಂದ್ರದ ಸೂಚನೆಯೂ ಬಂದಿದೆ. ಈ ಹಿನ್ನೆಲೆಯಲ್ಲೇ ಕಳೆದ 15 ದಿನಗಳಿಂದ ಅಶ್ವತ್ಥನಾರಾಯಣ ಅವರು, ಅವಿರತವಾಗಿ ಕೊರೊನಾ ತಡೆ ಕುರಿತ ಸಭೆಗಳನ್ನು ನಡೆಸಿ, ಪ್ರಮುಖ ನಿರ್ಣಯಗಳನ್ನು ತೆಗೆದುಕೊಂಡಿದ್ದಾರೆ.

ಕೋವಿಡ್ ಕಾರ್ಯಪಡೆ ಅಧ್ಯಕ್ಷರಾಗಿರುವ ಅಶ್ವತ್ಥ್‌ನಾರಾಯಣ್, ಸಭೆಯಲ್ಲಿ ತೆಗೆದುಕೊಳ್ಳುವ ತೀರ್ಮಾನಗಳಿಗೆ ಮುಖ್ಯಮಂತ್ರಿಯವರು ಸಮ್ಮತಿಸುತ್ತಿದ್ದಾರೆ. ಇದರಿಂದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಪಕ್ಕಕ್ಕೆ ಸರಿದಂತಾಗಿದೆ.

ಈ ಬೆಳವಣಿಗೆ ನಂತರ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಈಗ ರಾಜಕೀಯ ಕೇಂದ್ರ ಬಿಂದುವಾಗಿದ್ದಾರೆ. ಅವರು ಕಳೆದ ವಾರ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಹಲವು ಸಚಿವರು ಮತ್ತು ಶಾಸಕರು ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಅಷ್ಟೇ ಅಲ್ಲ ಒಂದಿಬ್ಬರು ಶಾಸಕರು ನಿನ್ನೆ ದೆಹಲಿಯಲ್ಲಿ ಜೋಶಿ ಅವರನ್ನು ಭೇಟಿ ಮಾಡಿ, ಚರ್ಚೆ ಮಾಡಿದ್ದಾರೆ.

## 1309 ಪಾಸಿಟಿವ್, 3 ಸಾವು

**(1ನೇ ಪುಟದಿಂದ)** ದಾಖಲಾಗಿವೆ. ನಗರದ ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಜಾದ್ ನಗರದ 68 ವರ್ಷದ ಮಹಿಳೆ, ಎಸ್.ಕೆ.ಎಸ್. ನಗರದ 69 ವರ್ಷದ ಮಹಿಳೆ ಹಾಗೂ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚನ್ನಗಿರಿ ತಾಲ್ಲೂಕು ನಲ್ಲೂರು ಗ್ರಾಮದ 50 ವರ್ಷದ ಮಹಿಳೆ ಕೊರೊನಾ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

**ಭಾವಪೂರ್ಣ ಶ್ರದ್ಧಾಂಜಲಿ**




ದಿ : 25-5-2021ರಂದು ನಿಧನರಾದ ಆತ್ಮೀಯರಾದ
**ಶ್ರೀ ಕೆ.ಇ.ಚನ್ನಪ್ಪ**
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
**ದಿ ದಾವಣಗೆರೆ ಗನ್ನಿ ಮರ್ಚೆಂಟ್ಸ್ ಅಸೋಸಿಯೇಷನ್, ದಾವಣಗೆರೆ.**

**ಭಾವಪೂರ್ಣ ಶ್ರದ್ಧಾಂಜಲಿ**



ದಿ. 25.05.2021ರಂದು ದೈವಾಧೀನರಾದ ಅನುಭವ ಮಂಟಪದ ಶ್ರೀ ತರಳಬಾಳು ಜಗದ್ಗುರು ಪ್ರೌಢಶಾಲೆಯ ಹಿರಿಯ ಸಹ ಶಿಕ್ಷಕಿ ಪ್ರತಿಷ್ಠಿತ ಪ್ರೊ.ಸಿ.ಎನ್.ಆರ್. ರಾವ್ ಫೌಂಡೇಷನ್ ವತಿಯಿಂದ ನೀಡುವ ಜವಾಹರ್‌ಲಾಲ್ ನೆಹರೂ ರಾಷ್ಟ್ರೀಯ ವಿಜ್ಞಾನ ಪ್ರಶಸ್ತಿ ಪುರಸ್ಕೃತರಾದ
**ಶ್ರೀಮತಿ ಎಂ.ಎಸ್. ಪ್ರಭಾವತಿ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಮತ್ತು ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸಲಾಯಿತು.
**ಆಡಳಿತ ಮಂಡಳಿ, ಮುಖ್ಯಸ್ಥರು, ಶಿಕ್ಷಕರು, ವಿದ್ಯಾರ್ಥಿ ವೃಂದ ಮತ್ತು ಸಿಬ್ಬಂದಿ ವರ್ಗ**
ಶ್ರೀ ತರಳಬಾಳು ಜಗದ್ಗುರು ಪ್ರೌಢಶಾಲೆ, ಅನುಭವ ಮಂಟಪ, ದಾವಣಗೆರೆ.

**ಹಳೇಪೇಟೆ ಮೈಲಾರದ ಚನ್ನಮಲ್ಲಿಕಾರ್ಜುನಪ್ಪ ನಿಧನ**



ದಾವಣಗೆರೆ ನಗರದ ಹಳೇಪೇಟೆ ವಾಸಿ ಮೈಲಾರದ ಚನ್ನಮಲ್ಲಿಕಾರ್ಜುನಪ್ಪ (ವೆರ್ಣೇಕರ್ ಮಲ್ಲಣ್ಣ) (65) ಅವರು ದಿನಾಂಕ 26.5.2021ರ ಬುಧವಾರ ಸಂಜೆ 3.45 ಗಂಟೆಗೆ ನಿಧನರಾದರು. ಮೂವರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 27.5.2021ರ ಗುರುವಾರ ಬೆಳಗ್ಗೆ 9 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಕಪ್ಪು ಶಿಲೀಂಧ್ರ ಸೋಂಕಿನಲ್ಲೂ ಸರ್ಕಾರ ಬೇಜವಾಬ್ದಾರಿ ಪ್ರದರ್ಶಿಸುತ್ತಿದೆ



**ಹರಪನಹಳ್ಳಿ ಕಾಂಗ್ರೆಸ್ ಮುಖಂಡರಾದ ಎಂ.ಪಿ. ವೀಣಾ ಮಹಾಂತೇಶ್ ಆರೋಪ**

ಹರಪನಹಳ್ಳಿ, ಮೇ 26- ಕೊರೊನಾ 2ನೇ ಅಲೆಯ ಬಗ್ಗೆ ಎಚ್ಚರವಾಗದ ಸರ್ಕಾರ ಈಗ ಕಪ್ಪು ಶಿಲೀಂಧ್ರ ಸೋಂಕಿನಲ್ಲೂ ಬೇಜವಾಬ್ದಾರಿತನ ಪ್ರದರ್ಶಿಸುತ್ತಿದೆ ಎಂದು ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಎಂ.ಪಿ. ವೀಣಾ ಮಹಾಂತೇಶ್ ಆರೋಪಿಸಿದರು.

ಈ ವೇಳೆ ಸದ್ದಿಲ್ಲದೆ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆಯನ್ನು ನಿರಂತರವಾಗಿ ಹೆಚ್ಚಳ ಮಾಡುತ್ತಾ ಬರುತ್ತಿದ್ದು, ಮೇ ತಿಂಗಳಲ್ಲಿ 13 ಬಾರಿ ದರ ಏರಿಕೆ ಮಾಡಿ ಕೊರೊನಾ ಸೋಂಕಿನ ಜೊತೆಗೆ ಜನರನ್ನು ಸುಲಿಗೆ ಮಾಡುತ್ತಿದೆ ಎಂದು ಕಿಡಿಕಾರಿದರು.

ಕೋವಿಡ್ ಸಂಕಷ್ಟದ ಮಧ್ಯೆ ಆರ್ಥಿಕ ಸ್ಥಿತಿ ಸಂಪೂರ್ಣ ನೆಲಕಚ್ಚಿರುವ ಹೊತ್ತಿನಲ್ಲಿ ಬೆಲೆ ಏರಿಕೆಗಳು ದೇಶದ ಆರ್ಥಿಕ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರಿ ವಿನಾಶಕಾರಿ ಆಗುವುದರಲ್ಲಿ ಅನುಮಾನವಿಲ್ಲ. ಶಿಕ್ಷಣ ಸಚಿವರಿಗೆ ಪರೀಕ್ಷೆಗಳ ಬಗ್ಗೆ ಅವಸರ ಏಕೆ. ಸರ್ಕಾರದ ಅಸಮರ್ಥ ನಿರ್ವಹಣೆಯಿಂದ ಸೋಂಕು ನಿಯಂತ್ರಣ ಮೀರಿ ಬೆಳೆಯುತ್ತಿದ್ದು, ಅದರ ನಡುವೆ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯು ಪರೀಕ್ಷೆ ನಡೆಸಿ, ವಿದ್ಯಾರ್ಥಿಗಳ ಜೀವದ ಜೊತೆ ಚೆಲ್ಲಾಟವಾಡಬಾರದು.

ಕೊರೊನಾ ಗ್ರಾಮೀಣ ಪ್ರದೇಶಗಳಲ್ಲಿ ಕೂಡ ವ್ಯಾಪಕವಾಗಿ ಹರಡುತ್ತಿದ್ದು, ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಗಳು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು, ಸ್ಥಳೀಯ ಅಧಿಕಾರಿಗಳ ತಂಡ ಪ್ರತಿ ಮನೆ ಮನೆಗಳಿಗೆ ಭೇಟಿ ನೀಡಿ ಸಮೀಕ್ಷೆ ಮಾಡಿ ರೋಗ ಲಕ್ಷಣಗಳು ಕಂಡು ಬರುವವರಿಗೆ ಸ್ಥಳದಲ್ಲಿಯೇ ಮೆಡಿಕಲ್ ಕಿಟ್ ವಿತರಣೆ ಮಾಡುವ ಕೆಲಸವನ್ನು ಮಾಡಬೇಕು ಎಂದರು.

# ಪಕ್ಷ ಮತ್ತು ಸಂಘಟನೆ ವಿಸ್ತಾರಗೊಳಿಸುವಂತೆ ಕರೆ

ದಾವಣಗೆರೆ, ಮೇ 26- ಹೆಚ್ಚು ಹೆಚ್ಚು ಕಾರ್ಯಕರ್ತರನ್ನು ತರುವುದರೊಂದಿಗೆ ಪಕ್ಷ ಮತ್ತು ಸಂಘಟನೆಯನ್ನು ವಿಸ್ತಾರಗೊಳಿಸುವಂತೆ ಸಿಪಿಐ ಮತ್ತು ಎಐಟಿಯುಸಿ ಜಿಲ್ಲಾ ಖಜಾಂಚಿ ಕಾಂ॥ ಆನಂದರಾಜ್ ಕರೆ ನೀಡಿದರು.

ಭಾರತ ಕಮ್ಯುನಿಸ್ಟ್ ಪಕ್ಷ ಹಾಗೂ ಎಐಟಿಯುಸಿ ಜಿಲ್ಲಾ ಮಂಡಳಿಯಿಂದ ನಗರದ ಕಾಂ ॥ ಪಂಪಾಪತಿ ಭವನದಲ್ಲಿ ಇಂದು ನಡೆದ 135 ನೇ ಮೇ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಲವು ಕಾರ್ಮಿಕರ ತ್ಯಾಗ ಬಲಿದಾನಗಳಿಂದ ಪಡೆದ ಕಾರ್ಮಿಕರ ಹಕ್ಕುಗಳನ್ನು ದುಡಿಯುವ ಜನರಿಗೆ ಕೊಡಿಸುವುದರೊಂದಿಗೆ ಹಾಗೂ ಹೊಸ ಹೊಸ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಘಟನೆಗಳನ್ನು ಕಟ್ಟುವುದಕ್ಕೆ ಪಕ್ಷ ಮತ್ತು ಎಐಟಿಯುಸಿ ಕಾರ್ಯಕರ್ತರು ಮುಂದಾಗಬೇಕೆಂದರು.



ಭಾರತ ಕಮ್ಯುನಿಸ್ಟ್ ಪಕ್ಷ ಹಾಗೂ ಎಐಟಿಯುಸಿ ಜಿಲ್ಲಾ ಮಂಡಳಿಯಿಂದ 135ನೇ ಮೇ ದಿನಾಚರಣೆ ಕಾರ್ಯಕ್ರಮದಲ್ಲಿ ಸಿಪಿಐ ಖಜಾಂಚಿ ಕಾಂ॥ ಆನಂದರಾಜ್

ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶ ಆಳುವವರು ಸ್ವಾರ್ಥಿಗಳಾಗಿರುವುದರಿಂದ ದುಡಿಯುವ ರೈತ ಕಾರ್ಮಿಕರು ಒಗ್ಗಟ್ಟಾಗಿ ಹೋರಾಟಕ್ಕಿಳಿಯಬೇಕೆಂದರು.

ಸಭೆಯನ್ನುದ್ದೇಶಿಸಿ ಬ್ಯಾಂಕ್ ನೌಕರರ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಕಾಂ॥ ಎಂ.ಬಿ.ಶಾರದಮ್ಮ, ಸಿಪಿಐ ದಾವಣಗೆರೆ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾಂ॥ ಆವರಗೆರೆ ವಾಸು, ಇಪ್ಟಾ ಸಂಘಟನೆಯ ಮುಖಂಡ ಕಾಂ॥ ಐರಣಿ ಚಂದ್ರು, ಸಿಪಿಐ ಜಿಲ್ಲಾ ಸಹ ಕಾರ್ಯದರ್ಶಿ ಕಾಂ॥ ಹೆಚ್.ಜಿ. ಉಮೇಶ್ ಮಾತನಾಡಿದರು.

ಕಾಂ॥ ಸುರೇಶ್, ಕಾಂ॥ ಶೇಖರಪ್ಪ, ಕಾಂ॥ ಪಂಪಾಪತಿ ಕಲ್ಯಾಣಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಕಾಂ॥ ಟಿ.ಎಸ್.ನಾಗರಾಜ್, ಕಾಂ॥ ಎನ್.ಟಿ.ಬಸವರಾಜ್, ಕಾಂ॥ ಕೆ.ಜಿ. ಶಿವಮೂರ್ತಿ ಸೇರಿದಂತೆ ಇತರರು ವೇದಿಕೆಯಲ್ಲಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಸಿಪಿಐ ಜಿಲ್ಲಾ ಮಂಡಳಿ ಸಹ ಕಾರ್ಯದರ್ಶಿ ಹಾಗೂ ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ॥ ಆವರಗೆರೆ ಚಂದ್ರು ಸ್ವಾಗತಿಸಿ, ನಿರೂಪಿಸಿದರು.

ಕಾರ್ಯಕ್ರಮಗಳಲ್ಲಿ ವಿವಿಧ ಸಂಘಟನೆಗಳ ಸೀಮಿತ ಪದಾಧಿಕಾರಿಗಳು ಭಾಗವಹಿಸಿದ್ದರು.

# ಅದ್ಧೂರಿ ಹುಟ್ಟುಹಬ್ಬದ ಬದಲಾಗಿ ಪೌರ ಕಾರ್ಮಿಕರಿಗೆ ಹಬೆ ಯಂತ್ರಗಳ ವಿತರಣೆ

## ನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ವಿಶಿಷ್ಟ ಆಚರಣೆ



ದಾವಣಗೆರೆ, ಮೇ 26- ಕೋವಿಡ್ ಸಂದರ್ಭದಲ್ಲಿ ಅದ್ಧೂರಿ ಹುಟ್ಟುಹಬ್ಬದ ಬದಲಾಗಿ, ವಾರ್ಡ್ ಸ್ವಚ್ಛಗೊಳಿಸಿ ನಾಗರಿಕರ ಆರೋಗ್ಯ ಕಾಪಾಡುವಲ್ಲಿ ವಿಶೇಷ ಕಾರ್ಯನಿರ್ವಹಿಸುವ ಪೌರ ಕಾರ್ಮಿಕರಿಗೆ ಹಬೆ ಯಂತ್ರಗಳನ್ನು ನೀಡುವ ಮೂಲಕ ವಿಶಿಷ್ಟ ರೀತಿಯಲ್ಲಿ 38ನೇ ವಾರ್ಡ್ ನಗರ ಪಾಲಿಕೆ ಸದಸ್ಯ ಗಡಿ ಗುಡಾಳ್ ಮಂಜುನಾಥ್ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ.

ತಮ್ಮ ಅಕಾಲಿಕ ಅನಾರೋಗ್ಯದ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಮುಂದೂಡುವ ಸಲಹೆಯನ್ನು ತಿರಸ್ಕರಿಸಿ, ಸದಾ ನಾಗರಿಕರಿಗೆ ಸೇವೆ ಒದಗಿಸುವ ಪೌರ ಕಾರ್ಮಿಕರಿಗೆ ಹಬೆ ಯಂತ್ರಗಳನ್ನು ನೀಡುವ ಕಾರ್ಯಕ್ರಮ ನಿಲ್ಲಬಾರದು ಎಂದು ತಮ್ಮ ಅನುಪಸ್ಥಿತಿಯಲ್ಲಿ ಇಂದು ವಿತರಣೆ ಮಾಡಲಾಯಿತು. ತಮ್ಮ ವಾರ್ಡ್ ಪೌರ ಕಾರ್ಮಿಕರಿಗೆ ಅಷ್ಟೇ ಅಲ್ಲದೆ, ಸಿದ್ದವೀರಪ್ಪ ಬಡಾವಣೆ, ಆಂಜನೇಯ ಬಡಾವಣೆಯ ಪೌರ ಕಾರ್ಮಿಕರಿಗೂ ಹಬೆ ಯಂತ್ರಗಳನ್ನು ವಿತರಣೆ ಮಾಡಲಾಯಿತು.

ವಾರ್ಡ್ ನಾಗರಿಕರು ಹಾಗೂ ಜಿಎಸ್‌ಎಂ ಸ್ನೇಹ ಬಳಗದವರು ಕಾರ್ಯಕ್ರಮದ ಮುಂದಾಳತ್ವ ವಹಿಸಿಕೊಂಡು ಸಸಿ ನೆಟ್ಟು, ಪೌರ ಕಾರ್ಮಿಕರನ್ನು ಸನ್ಮಾನಿಸಿ ಹಬೆ ಯಂತ್ರಗಳನ್ನು ನೀಡಲಾಯಿತು. ಅಲ್ಲದೇ, ಸಿಜಿ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಲಘು ಉಪಹಾರ ನೀಡುವ ಮೂಲಕ ಸರಳ ಹಾಗೂ ಅರ್ಥಪೂರ್ಣವಾಗಿ ಗಡಿಗುಡಾಳ್ ಮಂಜುನಾಥ್ ಅವರು ತಮ್ಮ ಹುಟ್ಟುಹಬ್ಬವನ್ನು ಆಚರಿಸಿದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯರಾದ ಕೆ. ಚಮನ್ ಸಾಬ್, ಪಾಮೇನಹಳ್ಳಿ ನಾಗರಾಜ್, ಕೆಪಿಸಿಸಿ ಮಾಧ್ಯಮ ವಿಶ್ಲೇಷಕ ಡಿ.ಬಸವರಾಜ್, ಮುಖಂಡರುಗಳಾದ ಇಟ್ಟಿಗುಡಿ ಮಂಜುನಾಥ್, ಹುಲ್ಮನೆ ಗಣೇಶ್, ಆಶಾ ಉಮೇಶ್, ಸ್ಥಳೀಯರಾದ ಪ್ರಮೋದ್, ವಿವೇಕ್, ಪ್ರಜ್ವಲ್, ಜ್ಯೋತಿರ್ಲಿಂಗ, ನಿಖಿಲ್, ಉಮೇಶ್, ಮನೋಜ್, ಮನೀಶ್, ಸತೀಶ್, ಮನು, ನವೀನ್, ರಕ್ಷಿತ್, ದೇವೇಂದ್ರಪ್ಪ, ನೀಲಕಂಠಪ್ಪ, ರಾಜು, ಮುರುಗೇಶ್, ನಿತಿನ್, ಕೃಷ್ಣಪ್ಪ, ಬಸಣ್ಣ, ಮಂಜುನಾಥ್, ಮಟ್ಟಿಕಲ್ ಮಂಜುನಾಥ್, ಶೌಕತ್ ಆಲಿ,ಮುರುಗೇಶ್, ಮಹಾಬಲೇಶ್, ಪ್ರಸನ್ನ, ಬಸವರಾಜ್, ಬಸವನಗೌಡ್ರು, ಪ್ರಭುಸ್ವಾಮಿ ಸೇರಿದಂತೆ ಇತರರಿದ್ದರು.

# ಕೇಂದ್ರದ ನೂತನ ನಿಯಮಗಳ ವಿರುದ್ಧ ಹೈಕೋರ್ಟ್‌ನಲ್ಲಿ ವಾಟ್ಸ್‌ಅಪ್ ಅರ್ಜಿ

ನವದೆಹಲಿ, ಮೇ 26 - ಕೇಂದ್ರ ಸರ್ಕಾರದ ಹೊಸ ಡಿಜಿಟಲ್ ನಿಯಮಗಳನ್ನು ಪ್ರಶ್ನಿಸಿ ವಾಟ್ಸ್ ಆಪ್ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ. ಮಂಗಳವಾರ ಸಂಜೆ ಅರ್ಜಿ ದಾಖಲಿಸಿರುವ ವಾಟ್ಸ್ ಆಪ್, ಮೊದಲ ಮೆಸೇಜ್ ಎಲ್ಲಿಂದ ಆರಂಭವಾಗಿದೆ ಎಂಬುದನ್ನು ಗುರುತಿಸುವಂತೆ ನಿಯಮ ರೂಪಿಸಿರುವುದು ಸಂವಿಧಾನ ಬಾಹಿರ ಎಂದು ಹೇಳಿದೆ.

ಮೆಸೇಜ್‌ಗಳ ಮೂಲ ತಿಳಿಯುವುದು ಎಂದರೆ ಪ್ರತಿಯೊಂದು ಮೆಸೇಜ್ ಕುರಿತು ಮಾಹಿತಿ ಸಂಗ್ರಹಿಸಿದಂತೆ. ಇದು ಪೂರ್ಣ ಎನ್‌ಕ್ರಿಪ್ಷನ್ ನಿಯಮಕ್ಕೆ ವಿರುದ್ಧವಾಗಿದೆ ಹಾಗೂ ಖಾಸಗಿತನದ ಉಲ್ಲಂಘನೆಯಾಗಿದೆ ಎಂದು ವಾಟ್ಸ್‌ಆಪ್ ಹೇಳಿದೆ.

ಫೇಸ್‌ಬುಕ್, ಟ್ವಿಟ್ಟರ್, ಯೂಟ್ಯೂಬ್, ಇನ್‌ಸ್ಟಾಗ್ರಾಮ್ ಹಾಗೂ ವಾಟ್ಸ್‌ಆಪ್ ಸೇರಿದಂತೆ ಹಲವಾರು ಸಾಮಾಜಿಕ ಜಾಲತಾಣ ಕಂಪನಿಗಳಿಗಾಗಿ ಕೇಂದ್ರ ಸರ್ಕಾರ ರೂಪಿಸಿರುವ ಹೊಸ ನಿಯಮಗಳು ಜಾರಿಗೆ ಬಂದಿವೆ.

ಇದಕ್ಕೂ ಮುಂಚೆ ಜಾಲತಾಣ ಕಂಪನಿಗಳು ತಮ್ಮಲ್ಲಿ ಪ್ರಕಟವಾಗುವ ಪೋಸ್ಟ್‌ಗಳಿಂದ ಸಂಪೂರ್ಣ ಜವಾಬ್ದಾರಿ ವಿನಾಯಿತಿ ಹೊಂದಿದ್ದವು. ನೂತನ ನಿಯಮಗಳ ಅನ್ವಯ, ಆಕ್ಷೇಪಾರ್ಹ ಮಾಹಿತಿಯನ್ನು ಅಧಿಕಾರಿಗಳು ತಿಳಿಸಿದ 36 ಗಂಟೆಗಳಲ್ಲಿ ಕಿತ್ತು ಹಾಕಬೇಕು. ದೂರುಗಳಿಗೆ ಸಂಬಂಧಿಸಿದಂತೆ ವ್ಯವಸ್ಥೆಯೊಂದನ್ನೂ ರೂಪಿಸಬೇಕು.

# ಕೂಡ್ಲಿಗಿ ತಹಶೀಲ್ದಾರ್ ಆಗಿ ಟಿ. ಜಗದೀಶ್



ಕೂಡ್ಲಿಗಿ, ಮೇ 26- ಕೂಡ್ಲಿಗಿ ತಹಶೀಲ್ದಾರ್ ಆಗಿದ್ದ ಮಹಾಬಲೇಶ್ವರ ಅವರು ಇತ್ತೀಚೆಗೆ ಕುಣಿಗಲ್‌ಗೆ ವರ್ಗಾವಣೆಯಾಗಿದ್ದು, ತೆರವಾಗಿದ್ದ ಅವರ ಸ್ಥಾನಕ್ಕೆ ಟಿ. ಜಗದೀಶ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಚಿತ್ರದುರ್ಗ ಜಿಲ್ಲೆ ನಾಯಕನಹಟ್ಟಿ ನಾಡ ಕಚೇರಿಯಲ್ಲಿ ಗ್ರೇಡ್ 2 ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜಗದೀಶ್ ಅವರಿಗೆ ಸರ್ಕಾರ ಬಡ್ತಿ ನೀಡಿ, ಖಾಲಿಯಾಗಿದ್ದ ಕೂಡ್ಲಿಗಿ ತಹಶೀಲ್ದಾರ್ ಹುದ್ದೆಗೆ ನಿಯೋಜಿಸಿದೆ.

# ಮುಖ್ಯಮಂತ್ರಿ ಬದಲಾವಣೆಗೆ ತೆರೆಮರೆಯ ಕಸರತ್ತು

**(1ನೇ ಪುಟದಿಂದ)** ಆರೋಪ ಮತ್ತಿತರೆ ವಿಷಯಗಳನ್ನು ಮುಂದಿಟ್ಟುಕೊಂಡಿರುವ ಕೆಲ ಶಾಸಕರು, ಜೂನ್ 7ರ ನಂತರ ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಒತ್ತಾಯಿಸುತ್ತಿದ್ದಾರೆ.

ಹಲವು ಶಾಸಕರು ದೆಹಲಿಯಲ್ಲಿ ಬೀಡು ಬಿಟ್ಟಿದ್ದಾರೆ. ಹಲವಾರು ಸ್ಥಳಗಳಲ್ಲಿ ಸಭೆಗಳು ನಡೆಯುತ್ತಿವೆ ಎಂಬುದು ತಿಳಿದು ಬಂದಿದೆ. ಸಭೆಯಲ್ಲಿ ಹಲವು ಸಚಿವರೂ ಸಹ ಭಾಗಿಯಾಗಿದ್ದಾರೆ. ಬದಲಾವಣೆಯ ಕುರಿತು ಚರ್ಚೆಗಳು ಕೇಳಿ ಬರುತ್ತಿರುವುದು ನಿಜ ಎಂದು ಕಂದಾಯ ಸಚಿವ ಆರ್. ಅಶೋಕ್ ಹೇಳಿದ್ದಾರೆ. ಕೆಲ ಶಾಸಕರು ದೆಹಲಿಯಲ್ಲಿದ್ದಾರೆ ಎಂಬುದು ನನಗೆ ತಿಳಿ ದಿದೆ, ಇಂತಹ ಬೆಳವಣಿಗೆಯ ಮಾತುಕತೆಗಳು ನಡೆಯು ತ್ತಿರುವುದು ನಿಜ. ಕೆಲವರು ನೇರವಾಗಿ, ಕೆಲವರು ಪರೋ ಕ್ಷವಾಗಿ ಭಾಗಿಯಾಗಿದ್ದಾರೆ. ಆದರೆ, ಈ ಸಂಕಷ್ಟದ ಸಮ ಯದಲ್ಲಿ ಜನರ ಜೊತೆ ನಿಲ್ಲುವುದು ನನ್ನ ಕರ್ತವ್ಯ ಎಂದಿದ್ದಾರೆ.

ಮತ್ತೊಂದೆಡೆ ಹೇಳಿಕೆ ನೀಡಿರುವ ಉಪಮುಖ್ಯಮಂತ್ರಿ ಸಿ.ಎನ್. ಅಶ್ವತ್ಥ ನಾರಾಯಣ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ವಸತಿ ಸಚಿವ ಸೋಮಣ್ಣ. ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್, ಇಂತಹ ಚುನಾವಣೆ ಬೆಳವಣಿಗೆಗಳ ಬಗ್ಗೆ ತಿಳಿದಿಲ್ಲ. ನಾಯಕತ್ವ ಬದಲಾವಣೆ ಇಲ್ಲ ಎಂದಿದ್ದಾರೆ.

ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹಾಗೂ ಶಾಸಕ ಅರವಿಂದ ಬೆಲ್ಲದ್ ಅವರು ದೆಹಲಿಯಲ್ಲಿ ಬೀಡು ಬಿಟ್ಟಿದ್ದು, ಬಿಜೆಪಿ ರಾಷ್ಟ್ರೀಯ ನಾಯಕತ್ವದ ಬಳಿ ಮಾತನಾಡಲು ಬಯಸಿದ್ದಾರೆ. ಯಡಿಯೂರಪ್ಪ ಕಾರ್ಯನಿರ್ವಹಣೆ ಕುರಿತು ಹಲವಾರು ಶಾಸಕರು ಅಸಮಾಧಾನ ಹೊಂದಿದ್ದಾರೆ ಎಂದವರು ಹೇಳಲು ಬಯಸಿದ್ದಾರೆ.

ಇನ್ನಷ್ಟು ಶಾಸಕರೂ ಸಹ ಇವರ ಜೊತೆ ಸೇರಬಹುದು ಎಂಬ ವರದಿಗಳಿದ್ದು, ಇದರಿಂದ ಬಿಜೆಪಿಯಲ್ಲಿ ರಾಜಕೀಯ ಗರಿಗೆದರಿದೆ.

ಈ ನಡುವೆ ಹೇಳಿಕೆ ನೀಡಿರುವ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿಗೆ ಜನಾದೇಶ ದೊರೆತಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ಹೆಸರು ಕೇಳಿ ಬರುತ್ತಿರುವವರು, ಯಡಿಯೂರಪ್ಪ ಇಲ್ಲದೇ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ ಎಂದಿದ್ದಾರೆ.

ಯಡಿಯೂರಪ್ಪ ಹೆಸರಿಲ್ಲದೇ ತಮ್ಮ ಕ್ಷೇತ್ರದಲ್ಲೇ ಗೆಲ್ಲಲು ಸಾಧ್ಯವಿಲ್ಲದವರು ಹೇಗೆ ಮುಖ್ಯಮಂತ್ರಿ ಆಗಲು ಸಾಧ್ಯ? ಹೈಕಮಾಂಡ್‌ಗೆ ಈ ಬಗ್ಗೆ ತಿಳಿದಿದೆ. ಯಡಿಯೂರಪ್ಪ ಕಾರಣದಿಂದಾಗಿ ದಕ್ಷಿಣ ಭಾರತದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅವರು ಇದನ್ನು ಕಳೆದುಕೊಳ್ಳಲು ಬಯಸುವುದಿಲ್ಲ ಎಂದಿದ್ದಾರೆ.

ದೆಹಲಿಯಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿಯಾಗಿರುವ ಶಂಕರ ಗೌಡ ಪಾಟೀಲ್ ಅವರು ದೆಹಲಿಗೆ ಇಬ್ಬರು ಶಾಸಕರು ಬಂದಿರುವುದು ನಿಜ ಎಂದಿದ್ದಾರೆ. ಆದರೆ, ಅವರು ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಿದ್ದಾರೆಯೇ ಎಂಬುದನ್ನು ನೀವೇ ನೋಡಿಕೊಳ್ಳಬೇಕು ಎಂದಿದ್ದಾರೆ.

# ಗಾಂಧಿವಾದಿ ದೊರೆಸ್ವಾಮಿ ನಿಧನಕ್ಕೆ ಗಣ್ಯರ ಶೋಕ

ದಾವಣಗೆರೆ, ಮೇ 26- ಸ್ವಾತಂತ್ರ್ಯ ಹೋರಾಟಗಾರ, ಹಿರಿಯ ಗಾಂಧಿವಾದಿ ಹೆಚ್. ಎಸ್ .ದೊರೆಸ್ವಾಮಿ ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಶೋಕ ವ್ಯಕ್ತಪಡಿಸಿದ್ದಾರೆ.

ನಾಡಿನ ನೆಲ- ಜಲ, ಭಾಷೆಯ ಉಳಿವಿಗಾಗಿ ನಡೆದ ಹಲವು ಚಳುವಳಿಗಳ ಪ್ರೇರಕ ಶಕ್ತಿಯಾಗಿ, ಅನ್ಯಾಯದ ವಿರುದ್ಧ ಸದಾ ಧ್ವನಿ ಎತ್ತುವ ಮೂಲಕ ಯುವ ಜನತೆಗೆ ಸ್ಫೂರ್ತಿಯಾಗಿದ್ದ ಶತಾಯುಷಿ ದೊರೆಸ್ವಾಮಿ ಅವರ ನಿಧನದಿಂದಾಗಿ ನಾಡು ಬಡವಾಗಿದೆ ಎಂದು ಮಂಜುನಾಥ್ ಹೇಳಿದ್ದಾರೆ.

**ಅನೀಸ್ ಪಾಷಾ :** ದೊರೆಸ್ವಾಮಿ ನಿಧನಕ್ಕೆ ಸಂತಾಪ ಸೂಚಿಸಿರುವ ನ್ಯಾಯವಾದಿ ಅನೀಸ್ ಪಾಷಾ, ಕೋಮು ಸೌಹಾರ್ದತೆಗೆ ನಿರಂತರವಾಗಿ ಶ್ರಮಿಸಿದ್ದ ದೊರೆಸ್ವಾಮಿ ಅವರು ವಸತಿ ಹೀನ ಹಾಗೂ ಭೂಮಿ ಹೀನರಿಗೆ ಭೂಮಿ ಮತ್ತು ವಸತಿ ಹೋರಾಟ ಸಮಿತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ರಾಜ್ಯಮಟ್ಟದ ಹೋರಾಟ ರೂಪಿಸಿದ್ದನ್ನು ಸ್ಮರಿಸಿದ್ದಾರೆ.

**ಪತ್ರಕರ್ತ ಚಂದ್ರಣ್ಣ :** ದೊರೆಸ್ವಾಮಿ ನಿಧನಕ್ಕೆ ಸಂತಾಪ ಸೂಚಿಸಿರುವ 'ಕರ್ನಾಟಕ ಎಕ್ಸ್ ಪ್ರೆಸ್' ಸಂಪಾದಕರೂ ಆದ ಕರ್ನಾಟಕ ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ನಿರ್ದೇಶಕ ಕೆ.ಚಂದ್ರಣ್ಣ, ದೊರೆಸ್ವಾಮಿ ನಿಧನದಿಂದ ಸ್ವಾತಂತ್ರ್ಯ ಚಳವಳಿಯ ಒಂದು ಹಿರಿಯ ಕೊಂಡಿಯನ್ನು ಕಳೆದುಕೊಂಡಂತಾಗಿದೆ ಎಂದು ತಿಳಿಸಿದ್ದಾರೆ.

**ಹನುಮಂತಪ್ಪ ಸೋಮಲಾಪುರ :** ನಾಡಿನ ನೆಲ- ಜಲ, ಭಾಷೆಯ ಉಳಿವಿಗಾಗಿ ನಡೆದ ಹಲವು ಚಳುವಳಿಗಳ ಪ್ರೇರಕ ಶಕ್ತಿಯಾಗಿ, ಅನ್ಯಾಯದ ವಿರುದ್ದ ಸದಾ ಧ್ವನಿಯಾಗಿದ್ದ ದೊರೆಸ್ವಾಮಿ ಅವರ ನಿಧನಕ್ಕೆ ಕೆಟಿಜೆ ನಗರದ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ ಸೋಮಲಾಪುರ ಸಂತಾಪ ವ್ಯಕ್ತಪಡಿಸಿದ್ದಾರೆ.

**ಎಲ್.ಜಿ. ಮಧುಕುಮಾರ್ :** ದೊರೆಸ್ವಾಮಿ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಬಸವಾಪಟ್ಟಣದ ಕನ್ನಡಪರ ಚಿಂತಕ ಎಲ್. ಜಿ.ಮಧುಕುಮಾರ್ ಅವರು, ದೊರೆಸ್ವಾಮಿ ನಿಧನದಿಂದ ಕನ್ನಡದ ಸಾಕ್ಷಿ ಪ್ರಜ್ಞೆಯಂತಿದ್ದ ದೀಪ ನಂದಿದಂತಾಗಿದೆ ಎಂದು ಬಣ್ಣಿಸಿದ್ದಾರೆ.

# ದೊರೆಸ್ವಾಮಿಗೆ ಸಾಣೇಹಳ್ಳಿ ಶ್ರೀ, ಮುರುಘಾ ಶರಣರ ಸಂತಾಪ

ದಾವಣಗೆರೆ, ಮೇ 26- ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ದೊರೆಸ್ವಾಮಿ ಅವರ ನಿಧನಕ್ಕೆ ಸಾಣೇಹಳ್ಳಿಯ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ದೊರೆಸ್ವಾಮಿ ಅವರು ಗಾಂಧಿ ತತ್ವದ ನೈಜ ಪ್ರತಿಪಾದಕರು, ಪ್ರಗತಿಪರ ಚಿಂತಕರು, ನ್ಯಾಯ ನಿಷ್ಠೂರಿಗಳು, ಮಾನವೀಯ ಅಂತಃಕರಣವುಳ್ಳವರಾಗಿದ್ದರು. 104 ವರ್ಷದ ಇಳಿವಯಸ್ಸಿನಲ್ಲೂ ಅತ್ಯಂತ ಕ್ರಿಯಾಶೀಲರಾಗಿದ್ದರು ಎಂದು ಸಂತಾಪದಲ್ಲಿ ಶ್ರೀಗಳು ತಿಳಿಸಿದ್ದಾರೆ.

ಇಂದಿನ ಪೀಳಿಗೆ ದೊರೆಸ್ವಾಮಿಯವರ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡರೆ ಅದು ಅವರಿಗೆ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ ಎಂದು ಶ್ರೀಗಳು ನುಡಿದಿದ್ದಾರೆ.

**ಮುರುಘಾ ಶರಣರು :** ಎಚ್.ಎಸ್. ದೊರೆಸ್ವಾಮಿ ನಿಧನಕ್ಕೆ ಚಿತ್ರದುರ್ಗ ಬೃಹನ್ಮಠದ ಡಾ. ಶಿವಮೂರ್ತಿ ಮುರುಘಾ ಶರಣರು ಸಂತಾಪ ವ್ಯಕ್ತಪಡಿಸಿದ್ದಾರೆ.

ಭೂ ಚಳವಳಿ, ನೀರಿನ ಹಕ್ಕಿಗಾಗಿ ಹಲವಾರು ಹೋರಾಟಗಳಲ್ಲಿ ಭಾಗವಹಿಸಿ ನಾಡು, ನುಡಿಯ ಸೇವೆಯನ್ನು ಮಾಡಿ ಇಂದು ನಮ್ಮನ್ನಗಲಿದ್ದು ನಾಡು ಅವರನ್ನು ಕಳೆದುಕೊಂಡು ಬಡವಾಗಿದೆ ಎಂದಿರುವ ಶರಣರು, ಅವರ ಆದರ್ಶ ಜೀವನ ಮತ್ತು ಜನಪರ ಕಾಳಜಿಯನ್ನು ಗುರುತಿಸಿ 2017ರಲ್ಲಿ ಶ್ರೀಮಠದಿಂದ 'ಮುರುಘಾ ಶ್ರೀ' ಪ್ರಶಸ್ತಿ ಪ್ರದಾನ ಮಾಡಿರುವುದನ್ನು ಸ್ಮರಿಸಿದ್ದಾರೆ.

# ಬ್ಯಾಂಕುಗಳ ಸಿಬ್ಬಂದಿಗಳಿಗೆ ಪ್ರಥಮ ಆದ್ಯತೆ ಮೇರೆಗೆ ಲಸಿಕೆ ನೀಡಲು ಒತ್ತಾಯ



ದಾವಣಗೆರೆ,ಮೇ 26- ಕೋವಿಡ್ ಸೋಂಕಿನಿಂದ ಸಂಕಷ್ಟದ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕುಗಳ ಸಿಬ್ಬಂದಿಗಳಿಗೆ ಕೋವಿಡ್ ಲಸಿಕೆ ಹಾಕಿಸುವಂತೆ ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷರೂ ಆಗಿರುವ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದ ಕಾರ್ಯದರ್ಶಿ ಎನ್.ಎ. ಮುರುಗೇಶ್ ಒತ್ತಾಯಿಸಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಇಂದು ಭೇಟಿ ಮಾಡಿದ ಅವರು, ಲಿಖಿತ ಮನವಿ ಪತ್ರ ಸಲ್ಲಿಸಿ, ಬ್ಯಾಂಕುಗಳ ಸಿಬ್ಬಂದಿಗಳಿಗೆ ಮೊದಲ ಆದ್ಯತೆ ಮೇರೆಗೆ ಪ್ರತ್ಯೇಕವಾಗಿ ಕೋವಿಡ್ ಲಸಿಕೆಯನ್ನು ಹಾಕಿಸುವ ಏರ್ಪಾಡು ಮಾಡುವಂತೆ ಕೇಳಿಕೊಂಡರು.

ಬ್ಯಾಂಕಿನ ಸಿಬ್ಬಂದಿಗಳನ್ನು 'ಫ್ರಂಟ್ ಲೈನ್ ಕೊರೊನಾ ವಾರಿಯರ್ಸ್' ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿ ದೇಶದ ಎಲ್ಲಾ ಬ್ಯಾಂಕ್ ಸಿಬ್ಬಂದಿಗಳಿಗೆ ಪ್ರತ್ಯೇಕ ಲಸಿಕೆ ನೀಡುವಂತೆ ಕರೆ ನೀಡಿದ್ದು, ಈ ಹಿನ್ನೆಲೆಯಲ್ಲಿ ತತ್‌ಕ್ಷಣವೇ ಕಾರ್ಯೋನ್ಮುಖರಾಗಬೇಕು ಎಂದು ಮುರುಗೇಶ್ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

# ಖಾಸಗಿ ಶಾಲಾ ಶಿಕ್ಷಕರ ಪಾಡು....

ಓದುಗರ ಪತ್ರ

**ಮಾನ್ಯರೇ,**

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ದೇವರಿಗೆ ಹೊರತು ಪಡಿಸಿ ದರೆ, ವಿದ್ಯೆ ಕಲಿಸಿದ ಗುರುವಿಗೆ ನಂತರದ ಸ್ಥಾನವಿದೆ. ಆದರೆ ಇಂದು ಖಾಸಗಿ ಶಾಲಾ ಶಿಕ್ಷಕರ ಸ್ಥಿತಿ ನೋಡಿದರೆ ನಿಜಕ್ಕೂ ಮೌಲ್ಯಯುತ ಸಮಾಜವೆನಿಸಿಕೊಂಡಿರುವ ನಾವುಗಳು ತಲೆ ತಗ್ಗಿಸಬೇಕಿದೆ.

ಕೋವಿಡ್ ಮಹಾಮಾರಿಯಿಂದ ಶಾಲೆಗಳು ಮುಚ್ಚಿದ್ದು, ತರಕಾರಿ, ಹೂವು, ಎಳನೀರು, ಹಣ್ಣುಗಳನ್ನು ತಳ್ಳುವ ಗಾಡಿಯಲ್ಲಿ ಇಟ್ಟುಕೊಂಡು ವ್ಯಾಪಾರ ಮಾಡಿ, ಹೊಟ್ಟೆ ತುಂಬಿಸಿಕೊಳ್ಳುವ ಸ್ಥಿತಿಗೆ ಬಂದಿದ್ದಾರೆ.

ರಾಜ್ಯದಲ್ಲಿ 21,000 ಖಾಸಗಿ ಅನುದಾನರಹಿತ ಶಾಲೆಗಳಿದ್ದು, 4.5 ಲಕ್ಷ ಬೋಧಕ, ಬೋಧಕೇತರ ಸಿಬ್ಬಂದಿಗಳ ನೆರವಿನಿಂದ 62 ಲಕ್ಷ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದಾರೆ.

ಇವರೆಲ್ಲರೂ ಹಲವು ಬಾರಿ ಶಾಂತಿ ಹೋರಾಟ, ಪ್ರತಿಭಟನೆ ಮಾಡಿದರೂ ಸರ್ಕಾರ ಸ್ಪಂದಿಸಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರ ತಿಂಗಳಿಗಿಷ್ಟು ಎಂದಾದರೂ ಸಹಾಯ ಮಾಡಬೇಕಿದೆ.

ಶಿಕ್ಷಕ ವೃಂದದವರಿಂದ ಸಂಬಂಧವಿರುವ ಪ್ರತಿಯೊಂದು ಸಂಘ-ಸಂಸ್ಥೆ, ಪ್ರತಿಯೊಬ್ಬ ನಾಗರಿಕರನೂ ಪ್ರತಿಭಟಿಸಬೇಕಿದೆ. ಸರ್ಕಾರದ ಮುಂದೆ ಖಾಸಗಿ ಶಿಕ್ಷಕರಿಗೆ ಅನುಕೂಲ ಮಾಡಿಕೊಡಿ ಎಂದು ಬೇಡಿಕೆ ಇಡಬೇಕಾಗಿದೆ. ಸರ್ಕಾರದ ಗಮನ ಸೆಳೆಯುವಲ್ಲಿ ಎಲ್ಲರ ಪಾತ್ರ ಬಹಳ ಮುಖ್ಯವಾಗಿದೆ.

**- ಕೆ. ಸಿರಾಜ್ ಅಹಮ್ಮದ್**, ಸಂತೇಬೆನ್ನೂರು.

# 'ಬ್ಲ್ಯಾಕ್ ಫಂಗಸ್' ಕಾಯಿಲೆ, ಮ್ಯೂಕಾರ್‌ಮೈಕೋಸಿಸ್

**(2ನೇ ಪುಟದಿಂದ)** ಈ ಕಾಯಿಲೆ ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದಿಲ್ಲ. ಸಾಧಾರಣವಾಗಿ ಆರೋಗ್ಯವಂತ ಮನುಷ್ಯರಲ್ಲಿ ಈ ಶಿಲೀಂಧ್ರ ಯಾವುದೇ ಕಾಯಿಲೆಯನ್ನು ಉಂಟುಮಾಡುವುದಿಲ್ಲ. ಈ ಹಲವು ಕಾರಣಗಳಿಂದಾಗಿ ಯಾವ ವ್ಯಕ್ತಿಗಳಲ್ಲಿ ರೋಗ ನಿರೋಧಕ ಶಕ್ತಿ ಕುಂಠಿತವಾಗಿರುತ್ತದೋ ಅಂತಹವರಲ್ಲಿ ಸೋಂಕು ಉಂಟಾಗುತ್ತದೆ.

✧ ಮಧುಮೇಹ ಕಾಯಿಲೆ ಇರುವವರು.

✧ ಡಯಾಬಿಟೀಸ್ ಕೀಟೋ ಆಸಿಡೋಸಿಸ್ ಹಂತದಲ್ಲಿರುವವರು.

✧ ಸ್ಟಿರಾಯಿಡ್ ಚಿಕಿತ್ಸೆ.

✧ ಫಾಗೋಸೈಟ್ (ಬಿಳಿ ರಕ್ತಕಣಗಳ ಒಂದು ಗುಂಪು) ಕೊರತೆ.

✧ ಅಂಗಾಂಗ ಕಸಿಗೆ ಒಳಗಾದವರು.

✧ ಕ್ಯಾನ್ಸರ್ ರೋಗಿಗಳಲ್ಲಿ.

✧ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದೀರ್ಘಕಾಲ ಇದ್ದವರು.

**ಮ್ಯೂಕರ್‌ಮೈಕೋಸಿಸ್ ಹೊಸ ಕಾಯಿಲೆಯೇ?**

ಖಂಡಿತವಾಗಿಯೂ ಅಲ್ಲ. ಭಾರತದಲ್ಲಿ ಇದು ಬಹಳ ಹಿಂದಿನಿಂದಲೂ, ಕೋವಿಡ್ ಪೂರ್ವ ಸಮಯದಲ್ಲಿ ಕಡಿಮೆ ಸಂಖ್ಯೆಯಲ್ಲಿ ವರದಿಯಾಗಿತ್ತು. ಕೊರೊನಾ ಕಾಯಿಲೆ ಬಂದ ನಂತರದ ದಿನಗಳಲ್ಲಿ ಮ್ಯೂಕರ್‌ಮೈಕೋಸಿಸ್ ಪ್ರಕರಣ ಹೆಚ್ಚಿನ ಸಂಖ್ಯೆಯಲ್ಲಿ ಬೆಳಕಿಗೆ ಬಂದಿದೆ. ಎಲ್ಲಾ ಕೊರೊನಾ ರೋಗಿಗಳಲ್ಲಿ ಮ್ಯೂಕಾರ್‌ನ ಸೋಂಕು ಕಾಣಿಸುವುದಿಲ್ಲ. ಯಾರಲ್ಲಿ ಈ ಕೆಳಗಿನ ಬದಲಾವಣೆಗಳು ಕೊರೋನಾದಿಂದಾಗಿ ಉಂಟಾಗುತ್ತವೆಯೋ ಅಂಥವರಲ್ಲಿ ಮ್ಯೂಕಾರ್ ಸೋಂಕಿನ ಸಾಧ್ಯತೆ ಹೆಚ್ಚು.

✧ ಕೋವಿಡ್ 19 ವೈರಾಣುವಿನ ಸೋಂಕಿಗೆ ತುತ್ತಾದವರಲ್ಲಿ ರಕ್ತದ ಸಕ್ಕರೆಯ ಮಟ್ಟ ಏರುಪೇರಾಗಿ ಮಧುಮೇಹ ರೋಗ ಉಲ್ಬಣಗೊಳ್ಳುತ್ತದೆ. ಏರಿದ ಸಕ್ಕರೆ ಮಟ್ಟದಲ್ಲಿ ಸೋಂಕು ಬೇಗನೆ ಮತ್ತು ಹೆಚ್ಚು ಯಶಸ್ವಿಯಾಗಿ ಉಂಟಾಗುತ್ತದೆ.

✧ ಫಾಗೋಸೈಟ್ ಜೀವಕಣಗಳ ಕೊರತೆ/ ಕಾರ್ಯಕ್ಷಮತೆ ತಗ್ಗುತ್ತದೆ. ಇದರಿಂದ ಸೋಂಕು ನಿರೋಧಕ ಶಕ್ತಿ ಕುಂಠಿತವಾಗುತ್ತದೆ.

✧ ಕೊರೊನಾ ರೋಗಿಗಳು ಅಗತ್ಯವಿಲ್ಲದೆ ದೀರ್ಘಕಾಲದವರೆಗೆ ಸ್ಟೀರಾಯಿಡ್ ಮಾತ್ರೆಗಳನ್ನು ಬಳಸಿದರೆ, ರೋಗ ನಿರೋಧಕ ಶಕ್ತಿ ಕಡಿಮೆಯಾಗಿ ಶಿಲೀಂಧ್ರಗಳು ಹೆಚ್ಚು ಬಲವಾಗಿ ಬೆಳೆಯುತ್ತವೆ. ಆದ್ದರಿಂದ ವೈದ್ಯರ ಸಲಹೆಯನ್ನು ಪಡೆಯದೆ ಸ್ಟೀರಾಯಿಡ್ ಮಾತ್ರೆಗಳನ್ನು ಬಳಸುವಂತಿಲ್ಲ.

**ಮ್ಯೂಕರ್‌ಮೈಕೋಸಿಸ್ ರೋಗದ ಗುಣ ಲಕ್ಷಣಗಳು:**

ಇತ್ತೀಚಿಗೆ (2020ನೇ ವರ್ಷದಿಂದ) ಕೊರೊನಾ ರೋಗಕ್ಕೆ ತುತ್ತಾದವರಲ್ಲಿ ಮೂಗು, ಕಣ್ಣು, ಮೆದುಳಿನ ಮ್ಯೂಕರ್‌ಮೈಕೋಸಿಸ್ ಕಾಯಿಲೆ ಪ್ರಕರಣಗಳು ಭಾರತದಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. ಸೋಂಕು ಮೊದಲು ಮೂಗು ಅಥವಾ ಪ್ಯಾರಾನಾಸಲ್ ಸೈನಸ್‌ಗಳಲ್ಲಿ ಪ್ರಾರಂಭಗೊಂಡು, ನಂತರ ಕಣ್ಣು, ಕಣ್ಣಿನಗೂಡು ಹಾಗೂ ಮೆದುಳಿಗೆ ಹರಡುವ ಸಂಭವ ಇರುತ್ತದೆ.

**1. ಪ್ರಾರಂಭಿಕ ಹಂತ:** ಮೂಗು, ಸೈನಸ್‌ಗಳಲ್ಲಿ ಸೋಂಕು ಇದ್ದಾಗ

✧ ತಲೆನೋವು/ಹಣೆನೋವು

✧ ಮೂಗು ಕಟ್ಟಿಕೊಳ್ಳುವುದು

✧ ಮೂಗಿನಿಂದ ರಕ್ತ ಮಿಶ್ರಿತ ಅಥವಾ ಕಂದು/ ಕಪ್ಪು ಬಣ್ಣದ ದ್ರವ ಸೋರಿಕೆ

✧ ಮುಖದಲ್ಲಿ ಊತ/ಚರ್ಮ ಕಪ್ಪಾಗುವುದು

✧ ಮುಖದಲ್ಲಿ ನೋವು, ಸಂವೇದನೆ ಇಲ್ಲವಾಗುವುದು

✧ ಸಡಿಲಗೊಂಡ ಹಲ್ಲು, ಬಾಯಿಯ ಅಂಗುಳಿನ ಮೇಲೆ ಹುಣ್ಣಾಗುವುದು.

**2. ಮಧ್ಯಮ ಹಂತ :** ಕಣ್ಣು, ಕಣ್ಣಿನ ಕಕ್ಷೆಯಲ್ಲಿ ಸೋಂಕು ಇದ್ದಾಗ

✧ ಕಣ್ಣು ಕೆಂಪಾಗುವುದು

✧ ಕಣ್ಣಿನಲ್ಲಿ ಊತ, ನೋವು

✧ ದೃಷ್ಟಿ ಕಡಿಮೆಯಾಗುವುದು/ ಇಲ್ಲವಾಗುವುದು, ಡಬಲ್ ದೃಷ್ಟಿ

✧ ಕಣ್ಣಿನ ರೆಪ್ಪೆ ಇಳಿ ಬೀಳುವುದು.

**3. ಬಹಳ ಮುಂದುವರಿದ ಹಂತ :** ಕಪಾಲದ ಒಳಗೆ/ಮೆದುಳಿನಲ್ಲಿ ಸೋಂಕು ಇದ್ದಾಗ

✧ ಕಪಾಲದ ನರಗಳ ಪಾರ್ಶ್ವವಾಯು

**ಮ್ಯೂಕರ್‌ಮೈಕೋಸಿಸ್ ರೋಗವನ್ನು ಪತ್ತೆ ಹಚ್ಚುವ ವಿಧಾನಗಳು:**

✧ ವೈದ್ಯರು ದೈಹಿಕ ಪರೀಕ್ಷೆಯನ್ನು ಮಾಡುವುದರಿಂದ, ಮೂಗಿನ ಎಂಡೋಸ್ಕೊಪಿ ಪರೀಕ್ಷೆಯಿಂದ ಕಾಯಿಲೆಯನ್ನು ಪತ್ತೆ ಹಚ್ಚುತ್ತಾರೆ.

✧ ಮೂಗಿನ ಸ್ವಾಬ್ ಮೂಲಕ ಮೂಗಿನ ದ್ರವವನ್ನು ತೆಗೆದು ಅಥವಾ ಬಯಾಪ್ಸಿ ಮಾಡಿ ಮೈಕ್ರೊಬಯಾಲಜಿ ಲ್ಯಾಬ್‌ನಲ್ಲಿ ಶಿಲೀಂಧ್ರವನ್ನು ಪತ್ತೆ ಹಚ್ಚುವುದು ಅಥವಾ ಬೆಳೆಸುವುದು. 6-7 ದಿನಗಳ ಕಾಲಾವಕಾಶ ತೆಗೆದುಕೊಳ್ಳುತ್ತದೆ (ಫಂಗಲ್ ಕಲ್ಚರ್).

✧ ಸಿ.ಟಿ. / ಎಮ್.ಆರ್.ಐ. ಸ್ಕ್ಯಾನ್ ಮುಖಾಂತರ ರೋಗವನ್ನು ಪತ್ತೆ ಹಚ್ಚಬಹುದು.

ಮೇಲೆ ತಿಳಿಸಿದ ಯಾವುದೇ ರೋಗ ಲಕ್ಷಣಗಳು ಕಾಣಿಸಿದಲ್ಲಿ ನಿರ್ಲಕ್ಷಿಸದೆ ರೋಗಿಗಳು ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು.

ಪ್ರಾರಂಭಿಕ ಹಂತದಲ್ಲಿದ್ದಾಗ ರೋಗವನ್ನು ಸಂಪೂರ್ಣ ಗುಣಪಡಿಸಲು ಸಾಧ್ಯವಾಗುತ್ತದೆ. ನಂತರದ ಹಂತಗಳಲ್ಲಿ ಗುಣಪಡಿಸುವುದು ಕಷ್ಟ. ದೃಷ್ಟಿ ಕಳೆದುಕೊಳ್ಳುವ, ಜೀವಕ್ಕೆ ಹಾನಿ ಉಂಟಾಗುವ ಸಾಧ್ಯತೆ ಇರುತ್ತದೆ. ಜೀವ ಉಳಿಸುವುದಕ್ಕೋಸ್ಕರ ಕಣ್ಣನ್ನೇ ತೆಗೆಯಬೇಕಾಗಬಹುದು.

ಮ್ಯೂಕರ್‌ಮೈಕೋಸಿಸ್ ರೋಗವನ್ನು ಆಂಫೋಟೆರಿಸಿನ್ ಬಿ, ಪೊಸಕೊನಾಜೋಲ್ ಔಷಧಿಗಳಿಂದ ಗುಣಪಡಿಸಬಹುದು (ಪ್ರಾರಂಭಿಕ ಹಂತದಲ್ಲಿ ಮಾತ್ರ). ಕೆಲವು ರೋಗಿಗಳಲ್ಲಿ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇರುತ್ತದೆ. ಇದನ್ನು ತಜ್ಞ ವೈದ್ಯರು ನಿರ್ಧರಿಸುತ್ತಾರೆ. ಆದ್ದರಿಂದ ವಾಟ್ಸಾಪ್ ಮೊರೆಹೋಗದೇ,ಸ್ವಯಂವೈದ್ಯ ಮಾಡಿಕೊಳ್ಳದೇ ರೋಗಲಕ್ಷಣ ಕಾಣಿಸಿಕೊಂಡ ತಕ್ಷಣವೇ ವೈದ್ಯರಿಂದ ಸಲಹೆ ಪಡೆಯುವುದು ಅಗತ್ಯ. ಕೋವಿಡ್ 19 ಸಂಬಂಧಿತ ಪರೀಕ್ಷೆಗಳನ್ನು, ಸಕ್ಕರೆ ಕಾಯಿಲೆಯ ಪರೀಕ್ಷೆಗಳನ್ನು ವೈದ್ಯರ ಸಲಹೆ ಮೇರೆಗೆ ಮಾಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ.

ಇಷ್ಟೆಲ್ಲ ವ್ಯವಸ್ಥೆ, ಚಿಕಿತ್ಸಾ ವಿಧಾನಗಳು ಇದ್ದರೂ ಮ್ಯೂಕರ್‌ಮೈಕೋಸಿಸ್ ಪ್ರಕರಣಗಳಿಂದ ಸಾವು, ನೋವು ಹೆಚ್ಚುವಿಕೆಗೆ ಕಾರಣಗಳೆಂದರೆ.

✧ ಸಾರ್ವಜನಿಕರಲ್ಲಿ ರೋಗದ ಅರಿವಿನ ಕೊರತೆ

✧ ಪ್ರಾರಂಭಿಕ ಹಂತದಲ್ಲಿ ನಿರ್ಲಕ್ಷಿಸಿ ರೋಗ ಹೆಚ್ಚಾದಾಗ ವೈದ್ಯರ ಬಳಿ ಓಡುವುದು.

✧ ಚಿಕಿತ್ಸೆಗಾಗಿ ತಗಲುವ ವೆಚ್ಚ ದುಬಾರಿ.

✧ ಅಗತ್ಯ ಪ್ರಮಾಣದಲ್ಲಿ ಔಷಧಿಗಳು ಲಭ್ಯವಿಲ್ಲದಿರುವುದು.

ನೆನಪಿನಲ್ಲಿಡಿ, ಶೀಘ್ರ ಪತ್ತೆ ಮತ್ತು ತ್ವರಿತ ಚಿಕಿತ್ಸೆಯೇ ಈ ರೋಗಕ್ಕೆ ಮೂಲಮಂತ್ರ.

# ಮಕ್ಕಳಿಗೆ ಸರ್ಕಾರದಿಂದ ಯಾವುದೇ ಪ್ರೋಟೋಕಾಲ್ ಇಲ್ಲ

## ಕೋವಿಡ್‌ಗೆ ಈಡಾದ ಮಕ್ಕಳ ನಿರ್ಲಕ್ಷ್ಯ: ಎಚ್.ಕೆ. ಪಾಟೀಲ್ ಆರೋಪ



**ಸರ್ಕಾರಿ ಬಸ್‌ಗೆ ಕಾಂಗ್ರೆಸ್ ಕಾನ್ಸಂಟ್ರೇಟರ್...**

**ಆಕ್ಸಿಜನ್ ಬಸ್ ಕೊಟ್ಟು ಪ್ರಚಾರ ಪಡೆದು ಕೊಂಡು ನಾಲ್ಕು ದಿನಗಳಾದರೂ ಇದುವರೆಗೂ ಬಸ್‌ನಲ್ಲಿ ಕಾನ್ಸಂಟ್ರೇಟರ್ ಅಳವಡಿಸಿಲ್ಲ. ನಾವು ಈಗ ಕೊಟ್ಟಿರುವ ಎರಡು ಬಸ್‌ಗಳಲ್ಲೂ ಇರುವ ಎಲ್ಲಾ ಸೌಲತ್ತುಗಳನ್ನು ಆ ಬಸ್‌ಗೂ ಸಹ ನಮ್ಮ ಪಿಕೆಕೆ ಸಂಸ್ಥೆಯಿಂದಲೇ ಅಳವಡಿಸಲಾಗುವುದು ಎಂದು ಪ್ರಕಾಶ ಕೋಳಿವಾಡ ಹೇಳಿದರು.**

ರಾಣೇಬೆನ್ನೂರು, ಮೇ 26- ಕೊರೊನಾ ಸೋಂಕಿತ ಮಕ್ಕಳಿಗಾಗಿ ಸರ್ಕಾರ ಇದುವರೆಗೂ ಯಾವುದೇ ರೀತಿಯಲ್ಲೂ ಪ್ರೋಟೋಕಾಲ್ ಮಾಡಿಲ್ಲ. ಮಕ್ಕಳ ಚಿಕಿತ್ಸೆಗೆ ಏನು ಅವಶ್ಯವಿದೆ. ಅವರ ಆರೈಕೆ ಹೇಗೆ ಎಂದು ಪಾಲಕರು ಗೋಳಾಡುತ್ತಿದ್ದಾರೆ. ಹಾವೇರಿ ಜಿಲ್ಲೆಯೊಂದರಲ್ಲಿ 721 ಮಕ್ಕಳು ಕೋವಿಡ್‌ನಿಂದ ಬಳಲುತ್ತಿದ್ದಾರೆ. ಈ ಬಗ್ಗೆ ಸರ್ಕಾರದಲ್ಲಿ ಯಾವುದೇ ಕ್ರಮ ಇಲ್ಲ ಎಂದು ಮಾಜಿ ಸಚಿವ ಎಚ್.ಕೆ. ಪಾಟೀಲ್ ಆರೋಪಿಸಿದರು.

ಅವರು, ಕಾಂಗ್ರೆಸ್ ಪಕ್ಷ ಹಾಗೂ ಪ್ರಕಾಶ ಕೋಳಿವಾಡರ ಪಿಕೆಕೆ ಸಂಸ್ಥೆಯಿಂದ ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ಆಕ್ಸಿಜನ್ ಬಸ್ ನೀಡಿ ಮಾಧ್ಯಮ ಗೋಷ್ಠಿ ನಡೆಸಿದರು.

ಉಪಯೋಗಕ್ಕೆ ಬಾರದ ವೆಂಟಿಲೇಟರ್‌ಗಳನ್ನು ಪಿಎಂ ಕೇರ್‌ನಲ್ಲಿ ತರಿಸಲಾಗಿದೆ. ತಜ್ಞರು ಕೊಟ್ಟ ಮಾಹಿತಿಯನ್ನು ಕಡೆಗಣಿಸಿ, ಲಸಿಕೆ ರಫ್ತು ಮಾಡಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನರ ಆರೋಗ್ಯ ರಕ್ಷಣೆಯಲ್ಲಿ ಬಹಳಷ್ಟು ನಿರ್ಲಕ್ಷ್ಯ ತಾಳಿವೆ. ಜವಾಬ್ದಾರಿ ಅರಿಯದ ಸರ್ಕಾರ ಇದಾಗಿದೆ. ಜನರ ಜೀವದ ಜೊತೆ ಚೆಲ್ಲಾಟ ಆಡುತ್ತಿದೆ ಎಂದು ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕು, ಜಿಲ್ಲೆಗಳಲ್ಲಿ ಕಾಂಗ್ರೆಸ್ ಶಾಸಕರು, ಮುಖಂಡರು ಆಕ್ಸಿಜನ್ ಬಸ್‌ಗಳನ್ನು ಇನ್ನಿತರೆ ಆರೋಗ್ಯ ಪರಿಕರಗಳನ್ನು ಕೊಡುವುದು ಸರ್ಕಾರದ ಜೊತೆಗಿನ ಸಹಕಾರ ಅಲ್ಲವೇ. ವೆಂಟಿಲೇಟರ್ ಕೆಲಸ ಮಾಡುತ್ತಿಲ್ಲ. ಅವು ಸರಿ ಇಲ್ಲಾ ಅಂತಾ ಹೇಳಿದರೆ ಕಾಂಗ್ರೆಸ್ ಆರೋಪ ಮಾಡುತ್ತಿದೆ ಎಂದು ಟೀಕಿಸುತ್ತಾರೆ. ಕೊರೊನಾ ಸಂಕಷ್ಟದಲ್ಲಿ ಕಾಂಗ್ರೆಸ್ ಜನರ ಜೊತೆ ಇದೆ. ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿದೆ ಎಂದು ಪಾಟೀಲ್ ಹೇಳಿದರು.

ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ ನಿವಾಸದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿ.ಪಂ. ಅಧ್ಯಕ್ಷ ಏಕನಾಥ ಭಾನುವಳ್ಳಿ, ವಿಧಾನ ಪರಿಷತ್ ಸದಸ್ಯ ಆರ್.ಬಿ. ಮಾನೆ, ಎಪಿಎಂಸಿ ಅಧ್ಯಕ್ಷ ಬನ್ನಿಕೋಡು, ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶ ಕೋಳಿವಾಡ, ಅಧ್ಯಕ್ಷ ಮಂಜನಗೌಡ ಪಾಟೀಲ, ಆರ್.ಎಂ. ಕುಬೇರಪ್ಪ, ಇರ್ಫಾನ್ ದಿಡಗೂರ, ನಗರಸಭೆ ಸದಸ್ಯರು ಹಾಗು ಇನ್ನಿತರರಿದ್ದರು.

# ಪ್ರವಾಸೋದ್ಯಮ ಉತ್ತೇಜನದತ್ತ ರಾಷ್ಟ್ರಗಳ ಗಮನ

**ವಿಶ್ವದ ಹಲವೆಡೆ ಕೊರೊನಾ ಇಳಿಕೆ**

ವಾಷಿಂಗ್ಟನ್, ಮೇ 26 - ವಿಶ್ವದಾದ್ಯಂತ ಕೊರೊನಾ ಪ್ರಕರಣಗಳು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ, ಪ್ರವಾಸೋದ್ಯಮ ಅವಲಂಬಿಸಿರುವ ದೇಶಗಳು ತ್ವರಿತವಾಗಿ ಗಡಿಗಳನ್ನು ತೆರೆಯಲು ಬಯಸುತ್ತಿವೆ.

ಕೊರೊನಾ ಕಾರಣದಿಂದಾಗಿ ಕಳೆದ ವರ್ಷ ಪ್ರವಾಸೋದ್ಯಮ ವಲಯ 4.5 ಟ್ರಿಲಿಯನ್ ಡಾಲರ್ ಹಾಗೂ 62 ದಶಲಕ್ಷ ಉದ್ಯೋಗ ನಷ್ಟ ಅನುಭವಿಸಿದೆ ಎಂದು ವರ್ಲ್ಡ್ ಟ್ರಾವೆಲ್ ಅಂಡ್ ಟೂರಿಸಂ ಕೌನ್ಸಿಲ್ ಅಂದಾಜಿಸಿದೆ. ವಿಮಾನಯಾನ ಸಂಸ್ಥೆಗಳು ಕಳೆದ ವರ್ಷ 126 ಶತಕೋಟಿ ಡಾಲರ್ ನಷ್ಟ ಅನುಭವಿಸಿವೆ. ಈ ವರ್ಷ ಇನ್ನೂ 48 ಶತಕೋಟಿ ಡಾಲರ್ ನಷ್ಟ ಅನುಭವಿಸಲಿವೆ ಎಂದು ಅಂದಾಜಿಸಲಾಗಿದೆ.

ಲಸಿಕೆ ಕಾರಣದಿಂದಾಗಿ ಹಲವಾರು ದೇಶಗಳಲ್ಲಿ ಕೊರೊನಾ ಇಳಿಕೆಯಾಗಿದ್ದು, ಅವರು ಪ್ರವಾಸಿಗರನ್ನು ಸ್ವಾಗತಿಸುವ ವಿಶ್ವಾಸದಲ್ಲಿವೆ.

ಬೇಸಿಗೆ ಪ್ರವಾಸೋದ್ಯಮಕ್ಕೆ ಉತ್ತಮ ಅವಧಿಯಾಗಿದೆ. ಬೇಸಿಗೆ ಮುಗಿಯುವಷ್ಟರಲ್ಲಿ ನಿಯಂತ್ರಣಗಳು ತೆರವಾಗಬೇಕೆಂಬ ಆಶಯವಿದೆ ಎಂದು ವರ್ಲ್ಡ್ ಟ್ರಾವೆಲ್ ಅಂಡ್ ಟೂರಿಸಂ ಮಂಡಳಿಯ ಉನ್ನತ ಅಧಿಕಾರಿಯಾದ ವರ್ಜಿನಿಯಾ ಮೆಸ್ಸಿನ ತಿಳಿಸಿದ್ದಾರೆ.

ವಿಶ್ವದ ಹಲವಾರು ದೇಶಗಳು ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ನಿಯಮಗಳನ್ನು ಹೊಂದಿವೆ. ಉದಾಹರಣೆಗೆ ಸಿಪ್ರಸ್‌ಗೆ ತೆರಳಲು ಬಯಸುವವರು ಆರ್‌ಟಿ - ಪಿಸಿಆರ್ ಪರೀಕ್ಷೆಯಲ್ಲಿ ನೆಗೆಟಿವ್ ಹೊಂದಿರಬೇಕು. ದೇಶಕ್ಕೆ ಬಂದ ಮೇಲೆ ಇನ್ನೊಂದು ಪರೀಕ್ಷೆಗೆ ಒಳಗಾಗಬೇಕು. ಆ ಪರೀಕ್ಷೆ ಫಲಿತಾಂಶ ಬರುವವರೆಗೂ ಪ್ರತ್ಯೇಕವಾಗಿರಬೇಕು.

ಯುರೋಪ್‌ನಲ್ಲಿ ಪ್ರವಾಸೋದ್ಯಮ ವಲಯವನ್ನು ನಿಧಾನವಾಗಿ ತೆರೆಯಲಾಗುತ್ತಿದೆ. ಇದು ಪ್ರವಾಸೋದ್ಯಮ ಅವಲಂಬಿಸಿರುವ ಗ್ರೀಕ್, ಸ್ಪೇನ್ ಹಾಗೂ ಟರ್ಕಿಗಳ ಮೇಲೆ ಒತ್ತಡ ತಂದಿದೆ. ಈ ನಡುವೆ, ಯುರೋಪ್ ಒಕ್ಕೂಟದ ರಾಯಭಾರಿಗಳು ಒಪ್ಪಂದಕ್ಕೆ ಬಂದಿದ್ದು, ಪೂರ್ಣ ಲಸಿಕೆ ಪಡೆದವರು ದೇಶಕ್ಕೆ ಬರಲು ಅನುಮತಿ ನೀಡುವುದಾಗಿ ಹೇಳಿದ್ದಾರೆ.

ಯುರೋಪ್ ಸದಸ್ಯ ದೇಶಗಳು ಈ ಬದಲಾವಣೆಗೆ ಇನ್ನೂ ಸಮ್ಮತಿ ನೀಡಬೇಕಿದೆ. ಯಾವಾಗಿನಿಂದ ಈ ನಿರ್ಧಾರ ಜಾರಿಗೆ ಬರಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಬ್ರಿಟನ್, ಅಮೆರಿಕ ಹಾಗೂ ಜಪಾನ್‌ನ ಜನರು ಸೋಮವಾರದಿಂದ ಸ್ಪೇನ್‌ಗೆ ಬರಬಹುದು. ಅವರು ಲಸಿಕೆ ಪಡೆದಿರಬೇಕು ಎಂದು ಅಲ್ಲಿನ ಪ್ರಧಾನ ಮಂತ್ರಿ ಪೆಡ್ರೋ ಸ್ಯಾಚೆಜ್ ಹೇಳಿದ್ದಾರೆ.

ಪ್ರವಾಸಿಗರು ಈಗಾಗಲೇ ಗ್ರೀಕ್‌ಗೆ ಬರಲು ಆರಂಭಿಸಿದ್ದಾರೆ. ಯುರೋಪ್ ಒಕ್ಕೂಟ ಹಾಗೂ ಇತರೆ 21 ದೇಶಗಳ ಜನರ ಲಸಿಕೆ ಪ್ರಮಾಣ ಪತ್ರ ಹಾಗೂ ಟೆಸ್ಟ್ ಪ್ರಮಾಣ ಪತ್ರಕ್ಕೆ ಅನುಮತಿ ನೀಡುವುದಾಗಿ ಗ್ರೀಕ್ ಹೇಳಿದೆ. ಏಷಿಯಾದ ಬಹುತೇಕ ಭಾಗಗಳಲ್ಲಿ ಕೊರೊನಾ ವೈರಸ್ ಉಲ್ಬಣಿಸುತ್ತಿರುವುದು ಜನರ ಕಳವಳಕ್ಕೆ ಕಾರಣವಾಗಿದೆ. ಇದು ಪ್ರವಾಸೋದ್ಯಮ ಪುನರಾರಂಭಕ್ಕೆ ಹಿನ್ನಡೆ ತಂದಿದೆ.

ಹಾಂಕಾಂಗ್ ಹಾಗೂ ಸಿಂಗಪುರಗಳು ಕ್ವಾರಂಟೈನ್ ರಹಿತ ಪ್ರವಾಸ ಬಯೋಬಲ್ ಆರಂಭಿಸುವುದನ್ನು ಮುಂದೂಡಿವೆ. ಲಸಿಕೆ ರಹಿತರು ದೇಶಕ್ಕೆ ಬಂದರೆ ದೀರ್ಘ ಕಾಲ ಕ್ವಾರಂಟೈನ್‌ನಲ್ಲಿರಬೇಕು ಎಂದು ಹಾಂಕಾಂಗ್ ತಿಳಿಸಿದೆ.

ಥೈಲ್ಯಾಂಡ್ ತನ್ನ ಗಡಿಗಳನ್ನು ಮುಚ್ಚಿದ್ದು, ಸೋಂಕು ಹರಡುವುದರ ಮೇಲೆ ನಿಗಾ ವಹಿಸಿದೆ. ಬ್ಯಾಂಕಾಕ್ ತನ್ನ ಮನರಂಜನಾ ತಾಣಗಳು ಹಾಗೂ ಪಾರ್ಕ್‌ಗಳನ್ನು ಮುಚ್ಚಿದೆ.

# ಶಾಂತಿಸಾಗರ ಜಲಾಶಯದಲ್ಲಿ ಮೀನುಗಾರಿಕೆ ನಿಷೇಧ

ದಾವಣಗೆರೆ, ಮೇ 26- ಮುಂಗಾರು ಮಳೆಗಾಲದ ಅವಧಿಯಲ್ಲಿ ಜೂನ್ 1 ರಿಂದ ಜುಲೈ 30 ರವರೆಗೆ ಮೀನು ಹಿಡಿಯುವುದನ್ನು ನಿಷೇಧಿಸಲಾಗಿದೆ.

ಚನ್ನಗಿರಿ ತಾಲ್ಲೂಕು ಶಾಂತಿಸಾಗರ ಜಲಾಶಯದಲ್ಲಿ ಮುಂಗಾರು ಮಳೆಗಾಲದ ಅವಧಿಯಲ್ಲಿ ಒಳನಾಡು ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕಿನ ವಿಲೇವಾರಿ ಕಾರ್ಯನೀತಿ 2014 ರ ಆದೇಶದಂತೆ ಮುಂಗಾರು ಮಳೆಗಾಲದ ಅವಧಿಯಲ್ಲಿ ಜೂನ್ 1 ರಿಂದ ಜುಲೈ 30 ಮಳೆಗಾಲದ ಅವಧಿಯಲ್ಲಿ ಮೀನುಗಳ ವಂಶಾಭಿವೃದ್ಧಿ ಚಟುವಟಿಕೆ ನಡೆಯುವುದರಿಂದ ರಾಜ್ಯದ ಎಲ್ಲಾ ಸರ್ವಋತು ಕೆರೆಗಳು, ಜಲಾಶಯಗಳು, ತೊರೆಗಳು, ಅಳಿವೆಗಳು ಮತ್ತು ನದಿಗಳಲ್ಲಿ ಮೀನು ಹಿಡಿಯುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಶಾಂತಿಸಾಗರ ಮೀನುಮರಿ ಪಾಲನಾ ಕೇಂದ್ರದ ಮೀನುಗಾರಿಕೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ವ.ಬಸಾಪುರ ಕೊರೊನಾ ಮುಕ್ತ



**ಕೃಷಿಯನ್ನೇ ಅವಲಂಬಿಸಿರುವ ಗ್ರಾಮಸ್ಥರು, ತಮ್ಮ ಕೆಲಸಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುತ್ತಾರೆ. ಮಲೇಬೆನ್ನೂರು ಪಟ್ಟಣ ಕೇವಲ ಅರ್ಧ ಕಿ.ಮೀ ಸಮೀಪದಲ್ಲಿದ್ದರೂ ಗ್ರಾಮಕ್ಕೆ ಕೊರೊನಾ ಸೋಂಕು ಕಾಲಿಡದಂತೆ ಜನ ಎಚ್ಚರ ವಹಿಸಿದ್ದಾರೆ.**

ಮಲೇಬೆನ್ನೂರು, ಮೇ 26- ಮಹಾಮಾರಿ ಕೊರೊನಾ 2ನೇ ಅಲೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕವಾಗಿ ಹರಡುತ್ತಿದ್ದು, ಸಾವು-ನೋವುಗಳಿಂದಾಗಿ ಜನ ಭಯಭೀತಿಯಿಂದ ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬಹುತೇಕ ಹಳ್ಳಿಗಳಲ್ಲಿ ಈ ಬಾರಿ ಕೊರೊನಾ ಅಟ್ಟಹಾಸ ಮೆರೆದಿದೆ. ಅಲ್ಲದೇ ನಾನಾ ಕಾರಣಗಳಿಂದಾಗಿ ಸಾವಿನ ಸಂಖ್ಯೆಯೂ ಹೆಚ್ಚಾಗಿದೆ.

ಇಂತಹ ಸಂದರ್ಭದಲ್ಲಿ ಜಿಗಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಬರುವ ಪುಟ್ಟ ಗ್ರಾಮವಾದ ವಡೆಯರ ಬಸಾಪುರದಲ್ಲಿ ಮಾತ್ರ ಕೊರೊನಾ 2ನೇ ಅಲೆಯಲ್ಲಿ ಇದುವರೆಗೂ ಒಂದೇ ಒಂದು ಕೊರೊನಾ ಸೋಂಕಿನ ಪ್ರಕರಣಗಳು ದಾಖಲಾಗದೇ 'ಕೊರೊನಾ ಮುಕ್ತ' ಗ್ರಾಮವಾಗಿ ಗಮನ ಸೆಳೆದಿದೆ.

ಮಲೇಬೆನ್ನೂರು ಪಟ್ಟಣದಿಂದ ನಂದಿಗುಡಿಗೆ ಹೋಗುವ ರಸ್ತೆಯಲ್ಲಿರುವ ಈ ಗ್ರಾಮ ಸುಮಾರು 500 ಜನಸಂಖ್ಯೆ ಹೊಂದಿದ್ದು, 450 ಮತದಾರರಿದ್ದಾರೆ. ಇಲ್ಲಿಯೂ ಒಬ್ಬರು ಗ್ರಾ.ಪಂ. ಸದಸ್ಯರಿದ್ದಾರೆ. ಗ್ರಾಮದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗಿರುವುದರಿಂದ ಜನರು ಪ್ರಜ್ಞಾವಂತರಾಗಿದ್ದಾರೆ.

ಗ್ರಾಮದಲ್ಲಿ ಗ್ರಾ.ಪಂ.ನಿಂದ 2 ಬಾರಿ ಸ್ಯಾನಿಟೈಸ್ ಮಾಡಿದ್ದು, ಜನರಲ್ಲಿ ಕೊರೊನಾ ಕುರಿತು ಅರಿವು ಮೂಡಿಸಿದ್ದೇವೆ. ಜನರೂ ಸಹ ನಮ್ಮ ಜೊತೆ ಕೈ ಜೋಡಿಸಿದ್ದು, ಗ್ರಾಮಕ್ಕೆ ಕೊರೊನಾ ಸೋಂಕು ಹರಡದಂತೆ ನೋಡಿಕೊಂಡು ಮಾದರಿಯಾಗಿದ್ದಾರೆ. ಜಿಗಳಿ ಗ್ರಾ.ಪಂ. ಪಿಡಿಓ ದಾಸರ ರವಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷ ಗ್ರಾಮದಲ್ಲಿ ಇಬ್ಬರಿಗೆ ಮಾತ್ರ ಸೋಂಕು ತಗುಲಿತ್ತು. ಈ ಬಾರಿ 2ನೇ ಅಲೆ ಬಹಳ ಅಪಾಯಕಾರಿಯಾಗಿರುವುದರಿಂದ ನಮ್ಮ ಗ್ರಾಮದ ಜನ ಜಾಗೃತರಾಗಿದ್ದಾರೆ. ಅನಾವಶ್ಯಕವಾಗಿ ಗ್ರಾಮದಿಂದ ಹೊರಗೆ ಹೋಗದೆ, ಮನೆಯಲ್ಲಿದ್ದೇವೆ ಎಂದು ಗ್ರಾಮದ ವೀರಭದ್ರಯ್ಯ ತಿಳಿಸಿದರು.

# ರಸಗೊಬ್ಬರ ಸಹಾಯ ಧನ ಹೆಚ್ಚಳ



ದಾವಣಗೆರೆ, ಮೇ 26 - ಕಚ್ಚಾ ವಸ್ತುಗಳ ದರ ದುಪ್ಪಟ್ಟಾಗಿದ್ದರೂ ಕೇಂದ್ರ ಸರ್ಕಾರವು ಆದರ ಹೊರೆಯನ್ನು ರೈತರಿಗೆ ಹೊರಿಸದೇ, ಸಹಾಯ ಧನದ ಮೊತ್ತವನ್ನು ಜಿಲ್ಲೆಗೆ 323 ರೂ. ಕೋಟಿಯಿಂದ 435 ರೂ. ಕೋಟಿಗೆ ಹೆಚ್ಚಿಸಿದೆ. ಸಕಾಲದಲ್ಲಿ ಕಡಿಮೆ ಬೆಲೆಯಲ್ಲಿ ರಸಗೊಬ್ಬರ ದೊರಕುವಂತೆ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಹಾಗೂ ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದಗೌಡ ಅವರನ್ನು ಅಭಿನಂದಿಸುತ್ತೇವೆ ಎಂದು ಜಿಲ್ಲಾ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಮಾರಾಟಗಾರರ ಸಂಘದ ಅಧ್ಯಕ್ಷ ನಾಗರಾಜ್ ಲೋಕಿಕೆರೆ ತಿಳಿಸಿದ್ದಾರೆ.

ಕೃಷಿ ಪ್ರಧಾನವಾದ ದಾವಣಗೆರೆ ಜಿಲ್ಲೆಯಲ್ಲಿ ಮೂರು ಹಂಗಾಮಿನಲ್ಲೂ ಕೃಷಿ ಚಟುವಟಿಕೆ ನಡೆಯುತ್ತದೆ. ರೈತರು ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ ರಸಗೊಬ್ಬರ ಬಳಕೆ ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಅಂದಾಜು ಡಿ.ಎ.ಪಿ. 28,419 ಮೆಟ್ರಿಕ್ ಟನ್, ಎಂ.ಒ.ಪಿ. 16,035 ಮೆಟ್ರಿಕ್ ಟನ್, ಎಸ್.ಎಸ್.ಪಿ. 5,010 ಮೆಟ್ರಿಕ್ ಟನ್, ಯೂರಿಯಾ 87,856 ಮೆಟ್ರಿಕ್ ಟನ್ ಹಾಗೂ ಇತರೆ ಎಲ್ಲಾ ರಸಗೊಬ್ಬರ ಸೇರಿ ಅಂದಾಜು 1,25,849 ಮೆಟ್ರಿಕ್ ಟನ್ ಬಳಕೆಯಾಗುತ್ತಿದೆ. ಕಳೆದ ಸಾಲಿನಲ್ಲಿ ಜಿಲ್ಲೆಗೆ 323 ರೂ. ಕೋಟಿ ಸಹಾಯ ಧನ ಸಂದಾಯವಾಗಿದೆ. ಸಹಾಯಧನ ಹೆಚ್ಚು ಸಂದಾಯವಾಗಲು ಸಹಕರಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಈರಣ್ಣ ಕಡಾಡಿ, ಕೃಷಿ ಸಚಿವ ಬಿ.ಸಿ. ಪಾಟೀಲ್ ಮತ್ತು ಸಂಸದ ಜಿ.ಎಂ. ಸಿದ್ದೇಶ್ವರ ಅವರಿಗೆ ಧನ್ಯವಾದ ಸಲ್ಲಿಸುತ್ತೇವೆ ಎಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷರೂ ಆಗಿರುವ ನಾಗರಾಜ್ ಲೋಕಿಕೆರೆ ಹೇಳಿದ್ದಾರೆ.

# ಆಟೋ, ಟ್ಯಾಕ್ಸಿ ಚಾಲಕರಿಗೆ 3 ಸಾವಿರ ರೂ. ನೆರವು

ಬೆಂಗಳೂರು, ಮೇ 26 - ಕೊರೊನಾ ನಿಯಂತ್ರಿಸುವ ಹಿನ್ನೆಲೆಯಲ್ಲಿ ಜಾರಿಗೊಳಿಸಲಾಗಿರುವ ಈ ಲಾಕ್‌ಡೌನ್‌ನಿಂದಾಗಿ ತೊಂದರೆಯಾಗುವ ಅರ್ಹ ಆಟೋ-ಟ್ಯಾಕ್ಸಿ ಮತ್ತು ಕ್ಯಾಬ್ ಚಾಲಕರಿಗೆ ತಲಾ ಮೂರು ಸಾವಿರ ರೂಪಾಯಿಯಷ್ಟು ಆರ್ಥಿಕ ಸಹಾಯ ನೀಡಲು ನಮ್ಮ ಸರ್ಕಾರವು ನಿರ್ಧರಿಸಿದಂತೆ ಸಾರಿಗೆ ಇಲಾಖೆಯಿಂದ ಈ ಪರಿಹಾರ ವಿತರಿಸಲು ವ್ಯವಸ್ಥೆ ಮಾಡಲಾಗಿದೆ.

ಅರ್ಹ ಅಭ್ಯರ್ಥಿಗಳು ಸೇವಾ ಸಿಂಧು ವೆಬ್ ಪೋರ್ಟಲ್ ಮೂಲಕ ಸೂಕ್ತ ದಾಖಲೆಗಳನ್ನು ಒದಗಿಸಿ ಈ ಪರಿಹಾರ ಧನ ಪಡೆದುಕೊಳ್ಳಲು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಉಪ ಮುಖ್ಯಮಂತ್ರಿಗಳು ಮತ್ತು ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರು ತಿಳಿಸಿದ್ದಾರೆ.

ನಾಳೆ ಗುರುವಾರ ಮಧ್ಯಾಹ್ನದಿಂದ ಅರ್ಜಿ ಸ್ವೀಕಾರ ಪ್ರಕ್ರಿಯೆ ಪ್ರಾರಂಭವಾಗುವುದು. ಹೀಗೆ ಅರ್ಜಿ ಸಲ್ಲಿಸಿದ ಸೂಕ್ತ ಫಲಾನುಭವಿಗಳ ಅಕೌಂಟ್‌ಗಳಿಗೆ ನೇರವಾಗಿ ಈ ಪರಿಹಾರ ಧನವನ್ನು ವರ್ಗಾಯಿಸಲಾಗುವುದು ಎಂದವರು ಹೇಳಿದ್ದಾರೆ.

# ದೆಹಲಿಯಲ್ಲಿನ ರೈತರ ಹೋರಾಟ ಬೆಂಬಲಿಸಿ ರೈತ ಸಮಿತಿಯಿಂದ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ



ದಾವಣಗೆರೆ, ಮೇ 26- ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ರೈತ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ ಹಾಗೂ ದೆಹಲಿಯಲ್ಲಿ ಮತ್ತೆ ನಡೆಯುತ್ತಿರುವ ರೈತರ ಹೋರಾಟ ಬೆಂಬಲಿಸಿ ರೈತ ಹೋರಾಟ ಸಮಿತಿಯು ಕಪ್ಪು ಪಟ್ಟಿ ಧರಿಸಿ ಇಂದು ಮಲ್ಲಶೆಟ್ಟಿಹಳ್ಳಿ ಗ್ರಾಮದ ಸಮೀಪ ಇರುವ 22 ಕೆರೆಗಳ ಏತ ನೀರಾವರಿ ಪಂಪ್‌ಹೌಸ್ ಬಳಿ ಹೊಲದಲ್ಲಿ ಪ್ರತಿಭಟನೆ ನಡೆಸಿತು. ರೈತ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಕೂಡಲೇ ಕೈ ಬಿಡುವಂತೆ ಒತ್ತಾಯಿಸಲಾಯಿತು.

ಈ ವೇಳೆ ಮಾತನಾಡಿದ ಹೋರಾಟ ಸಮಿತಿ ಅಧ್ಯಕ್ಷ ಆವರಗೆರೆ ಹೆಚ್.ಜಿ.ಉಮೇಶ್, ದೇಶವನ್ನು ಆಳುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ಮತ್ತು ಕಾರ್ಮಿಕ ವಿರೋಧಿ ನೀತಿಗಳನ್ನು ಜಾರಿಗೆ ತಂದಿವೆ. ಅಲ್ಲದೇ ಅವುಗಳನ್ನು ಬಲವಂತವಾಗಿ ಅನುಷ್ಠಾನಗೊಳಿಸುವ ಮೂಲಕ ರೈತರು ಮತ್ತು ಕಾರ್ಮಿಕರನ್ನು ಬೀದಿಪಾಲು ಮಾಡಿವೆ. ಕೃಷಿ, ಎಪಿಎಂಸಿ, ವಿದ್ಯುತ್ ಸೇರಿದಂತೆ ರೈತ, ಕಾರ್ಮಿಕರಿಗೆ ಮಾರಕವಾದ ಕಾಯಿದೆಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಇಂದಿಗೆ ಸರಿಯಾಗಿ 6 ತಿಂಗಳಾಗಿವೆ. ಆದರೆ, ನಮ್ಮ ಪ್ರತಿಭಟನೆಗಳಿಗೆ ಮನ್ನಣೆ ನೀಡದ ಕೇಂದ್ರ ಸರ್ಕಾರ ಕಣ್ಣಿದ್ದು ಕುರುಡರಾಗಿ, ಕಿವಿಯಿದ್ದು ಕಿವುಡರಂತೆ ವರ್ತಿಸುತ್ತಿದೆ.

ಆ ಮೂಲಕ ಆಳುವ ಪಕ್ಷ ಬಂಡವಾಳಶಾಹಿ ವರ್ಗವನ್ನು ಸಂರಕ್ಷಿಸುತ್ತಿದೆ. ಅಲ್ಲದೇ ರೈತ ಮತ್ತು ಕಾರ್ಮಿಕ ವರ್ಗವನ್ನು ಕಾಲ ಕೆಳಗೆ ತುಳಿದು ಓಡಾಡುತ್ತಿದೆ. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಮೋದಿ ಸರ್ಕಾರ ದುಡಿಯುವ ವರ್ಗದ ಪರವಾಗಿ ಯಾವುದೇ ಕೆಲಸ ಮಾಡಿಲ್ಲ. ಬ್ಯಾಂಕುಗಳ ವಿಲೀನಿಕರಣ ಸೇರಿದಂತೆ, ಎಲ್ಲಾ ರಾಷ್ಟ್ರೀಕೃತ ಸಂಸ್ಥೆಗಳನ್ನು ಖಾಸಗಿಕರಣ ಮಾಡಿ, ಎಲ್ಲವನ್ನೂ ಮುಚ್ಚಿ ದೇಶವನ್ನೇ ಹಾಳು ಮಾಡಿದೆ. ದೇಶದ ದುಡಿಯುವ ವರ್ಗದ ಜನತೆ ಅಭದ್ರತೆಯಲ್ಲಿ ಇದ್ದಾರೆ. ಆರ್ಥಿಕವಾಗಿ ದುರ್ಬಲರಾಗಿದ್ದಾರೆ ಎಂದು ತಿಳಿಸಿದರು.

ರೈತ ಮುಖಂಡರಾದ ಇ. ಶ್ರೀನಿವಾಸ್, ಸತೀಶ್ ಅರವಿಂದ್, ಮಲ್ಲಶೆಟ್ಟಿ ಹಳ್ಳಿ ಚನ್ನಬಸಪ್ಪ, ಗೊಲ್ಲರಹಟ್ಟಿ ಬಸವರಾಜ್, ತೋಳಹುಣಸೆ ಜಯಪ್ಪ, ಶಿವಕುಮಾರ್, ಹಾಲೇಶ್ ನಾಯ್ಕ, ಐರಣಿ ಚಂದ್ರು, ನರಗ ರಂಗನಾಥ್ ಇದ್ದರು.

# ಜಿಲ್ಲೆಗೆ ಅಗತ್ಯ ರಸಗೊಬ್ಬರ ಪೂರೈಸಲು ಸಂಸದರ ಒತ್ತಾಯ



ದಾವಣಗೆರೆ, ಮೇ 26- ಜಿಲ್ಲೆಗೆ ಅಗತ್ಯವಿರುವ ರಸಗೊಬ್ಬರ ಪೂರೈಸುವಂತೆ ಕೇಂದ್ರ ರಸಗೊಬ್ಬರ ಖಾತೆ ಸಚಿವ ಡಿ.ವಿ. ಸದಾನಂದಗೌಡ ಅವರಲ್ಲಿ ದೂರವಾಣಿ ಮೂಲಕ ಸಂಸದ ಜಿ.ಎಂ. ಸಿದ್ದೇಶ್ವರ ಮನವಿ ಮಾಡಿದ್ದಾರೆ.

ರಸಗೊಬ್ಬರದ ಮೇಲಿನ ಸಬ್ಸಿಡಿ ಏರಿಕೆ ಮಾಡಿ ರೈತರಿಗೆ ರಸಗೊಬ್ಬರ ದರ ಕಡಿಮೆಯಾಗುವಂತೆ ಮಾಡಿರುವ ಕೇಂದ್ರ ಸರ್ಕಾರದ ಕ್ರಮದಿಂದಾಗಿ ರೈತರು ರಸಗೊಬ್ಬರ ಖರೀದಿಗೆ ಮುಗಿಬಿದ್ದಿದ್ದಾರೆ.

ದಾವಣಗೆರೆ ಜಿಲ್ಲೆಗೆ ಡಿಎಪಿ ಗೊಬ್ಬರ ಏಪ್ರಿಲ್ ಹಾಗೂ ಮೇ ತಿಂಗಳ ಬಾಕಿ 5,338 ಮೆಟ್ರಿಕ್ ಟನ್ ಹಾಗೂ ಜೂನ್ ತಿಂಗಳ ಕೋಟಾ 400 ಮೆಟ್ರಿಕ್ ಟನ್ ಮತ್ತು ಜೂನ್ ತಿಂಗಳ ಯೂರಿಯಾ ಗೊಬ್ಬರ ಕೋಟಾ 7,500 ಮೆಟ್ರಿಕ್ ಟನ್ ಗೊಬ್ಬರವನ್ನು ತಕ್ಷಣ ಹಂಚಿಕೆ ಮಾಡುವಂತೆ ಮನವಿ ಮಾಡಿದ್ದಾರೆ. ಏಪ್ರಿಲ್, ಮೇ ತಿಂಗಳ ಬಾಕಿ ಹಾಗೂ ಜೂನ್ ತಿಂಗಳ ಕೋಟಾವನ್ನು ಇನ್ನೊಂದು ವಾರದೊಳಗೆ ಜಿಲ್ಲೆಗೆ ಕಳುಹಿಸುವ ಭರವಸೆ ನೀಡಿದ್ದಾರೆ ಎಂದು ಸಂಸದರು ತಿಳಿಸಿದ್ದಾರೆ. ಸಚಿವರ ಸೂಚನೆ ಮೇರೆಗೆ ರಾಜ್ಯ ಕೃಷಿ ಇಲಾಖೆ ಆಯುಕ್ತ ಬ್ರಿಜೇಶ್ ದೀಕ್ಷಿತ್ ಹರಪನಹಳ್ಳಿ ತಾಲ್ಲೂಕಿನ ರಸಗೊಬ್ಬರ ಕೋಟಾವನ್ನು ಬಳ್ಳಾರಿ ಜಿಲ್ಲೆಯಿಂದ ಬದಲಾವಣೆ ಮಾಡಿ ದಾವಣಗೆರೆ ಜಿಲ್ಲೆಗೆ ಹಂಚಿಕೆ ಮಾಡುವ ಆದೇಶವನ್ನು ಒಂದೆರಡು ದಿನಗಳೊಳಗಾಗಿ ಕಳುಹಿಸುವ ಮಾಹಿತಿ ನೀಡಿದ್ದಾರೆ ಎಂದು ಸಿದ್ದೇಶ್ವರ ಹೇಳಿದ್ದಾರೆ.

# ಹೊಲಗಳಲ್ಲಿನ ಹುಲ್ಲನ್ನು ವ್ಯರ್ಥ ಮಾಡದೆ ಗೋಶಾಲೆಗೆ ನೀಡಲು ಮನವಿ



ದಾವಣಗೆರೆ, ಮೇ 26- ಆವರಗೆರೆ ಬಳಿಯ ಶ್ರೀ ಭಗವಾನ್ ಮಹಾವೀರ ಗೋಶಾಲೆಯಲ್ಲಿ 540 ಹಸು ಮತ್ತು ಕರುಗಳನ್ನು ಸಾಕಲಾಗುತ್ತಿದ್ದು, ರೈತ ಬಾಂಧವರು ತಮ್ಮ ಭತ್ತದ ಕಟಾವಿನಲ್ಲಿ ಹುಲ್ಲನ್ನು ಹಾಗೆಯೇ ಬಿಡದೇ ಗೋಶಾಲೆಗೆ ಕಳುಹಿಸಿ ಸಾರ್ಥಕ ಸೇವೆ ಸಲ್ಲಿಸಲು ಮನವಿ ಮಾಡಲಾಗಿದೆ. ಒಂದು ಪಕ್ಷ ತಮ್ಮಲ್ಲಿ ಹುಲ್ಲನ್ನು ಕಳುಹಿಸಲು ಅನಾನುಕೂಲತೆ ಇದ್ದಲ್ಲಿ ಈ ಕೆಳಕಂಡ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿದಲ್ಲಿ ನಾವೇ ಹುಲ್ಲನ್ನು ಒಯ್ಯುವ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತೇವೆ.

ಈ ರೀತಿ ಗೋಶಾಲೆಗೆ ಹುಲ್ಲನ್ನು ನೀಡುವುದರೊಂದಿಗೆ ಹಸು ಮತ್ತು ಕರುಗಳ ರಕ್ಷಣೆಗೆ ಸಹಕರಿಸುವಂತೆ ಗೋಶಾಲೆಯ ಜಿತೇಂದ್ರ ಜೈನ್ (94485 16033) ಮತ್ತು ದಿನೇಶ್ ಜೈನ್ (99803 39333) ಕೋರಿದ್ದಾರೆ.

# ರಾಜ್ಯದಲ್ಲಿ 26,929 ಕೊರೊನಾ ಸೋಂಕಿತರು

ಬೆಂಗಳೂರು, ಮೇ 26 – ರಾಜ್ಯದಲ್ಲಿ ಬುಧವಾರ 26,929 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 40,741 ಜನರು ಕೊರೊನಾದಿಂದ ಗುಣಮುಖರಾಗಿದ್ದಾರೆ ಎಂದು ರಾಜ್ಯ ಆರೋಗ್ಯ ಇಲಾಖೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಬೆಂಗಳೂರು ನಗರದಲ್ಲಿ 6,433 ಸೋಂಕಿತರು ಕಂಡುಬಂದಿದ್ದಾರೆ. ನಗರದಲ್ಲಿ 18,342 ಜನರು ಕೊರೊನಾದಿಂದ ಗುಣಮುಖರಾಗಿದ್ದಾರೆ.

# ದೇಶದಲ್ಲಿ 2.08 ಲಕ್ಷ ಸೋಂಕಿತರು ಪತ್ತೆ

ನವದೆಹಲಿ, ಮೇ 26 - ಭಾರತದಲ್ಲಿ ಬುಧವಾರ ಒಂದೇ ದಿನ 2.08 ಲಕ್ಷ ಸೋಂಕಿತರು ಕಂಡು ಬಂದಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇದೇ ದಿನ 4,157 ಜನ ಸಾವನ್ನಪ್ಪಿದ್ದು, ಒಟ್ಟು ಮೃತರ ಸಂಖ್ಯೆ 3.11 ಲಕ್ಷಕ್ಕೆ ತಲುಪಿದೆ. ದೇಶದಲ್ಲಿ ಮಂಗಳವಾರ 22.17 ಲಕ್ಷ ಕೊರೊನಾ ಟೆಸ್ಟ್ ಮಾಡಲಾಗಿದೆ. ಇದುವರೆಗೆ ಇಷ್ಟು ಪ್ರಮಾಣದ ಟೆಸ್ಟ್ ಮಾಡಿರುವುದು ಇದೇ ಮೊದಲು. ಪಾಸಿಟಿವ್ ದರ ಶೇ.9.42 ಎಂದು ಸಚಿವಾಲಯ ಹೇಳಿದೆ.

# 20 ಜನರಿಗೆ ಲಸಿಕೆ ಅದಲು ಬದಲು



ಸಿದ್ಧಾರ್ಥನಗರ (ಉತ್ತರ ಪ್ರದೇಶ), ಮೇ 26 – ಉತ್ತರ ಪ್ರದೇಶದ ಸಿದ್ಧಾರ್ಥ ನಗರದಲ್ಲಿ 20 ಗ್ರಾಮಸ್ಥರಿಗೆ ಎರಡನೇ ಡೋಸ್ ನೀಡುವಾಗ ಕೋವಿಶೀಲ್ಡ್ ಬದಲು ಕೋವ್ಯಾಕ್ಸಿನ್ ನೀಡಿದ ಘಟನೆ ನಡೆದಿದೆ.

ಬರ್ಹನಿ ಎಂಬ ಹಳ್ಳಿಯಲ್ಲಿ ಈ ಘಟನೆ ನಡೆದಿದೆ. ಈ ಘಟನೆಯ ತನಿಖೆಗೆ ಆದೇಶಿಸಲಾಗಿದೆ. ನಿರ್ಲಕ್ಷ್ಯ ತೋರಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗು ವುದು ಎಂದು ಮುಖ್ಯ ವೈದ್ಯಕೀಯ ಅಧಿಕಾರಿ ಸಂದೀಪ್ ಚೌಧರಿ ತಿಳಿಸಿದ್ದಾರೆ.

ಬೇರೆ ಲಸಿಕೆ ಪಡೆದ ಯಾರಲ್ಲೂ ಇದುವರೆಗೂ ಆರೋಗ್ಯ ಸಮಸ್ಯೆ ಕಂಡು ಬಂದಿಲ್ಲ. ಆರೋಗ್ಯ ಇಲಾಖೆಯ ತಂಡ ಇವರೆಲ್ಲರನ್ನೂ ಭೇಟಿ ಮಾಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಗ್ರಾಮದ ಒಬ್ಬ ರಾದ ರಾಮ್ ಸೂರತ್ ಎಂಬುವವರು ಮೊದಲ, ಎರಡನೇ ಡೋಸ್ ಲಸಿಕೆ ಬೇರೆ ಬೇರೆಯಾಗಿರುವ ಬಗ್ಗೆ ಆರೋಗ್ಯ ಕಾರ್ಯಕರ್ತರ ಗಮನಕ್ಕೆ ತಂದಿದ್ದರು.

ಆರೋಗ್ಯ ಕಾರ್ಯಕರ್ತರಿಂದ ಲೋಪವಾಗಿರುವುದನ್ನು ಒಪ್ಪಿಕೊಂಡಿರುವ ಮುಖ್ಯ ಆರೋಗ್ಯಾಧಿಕಾರಿ ಚೌಧರಿ, ಲಸಿಕೆ ಪಡೆದವರ ಮೇಲೆ ನಿಗಾ ಇರಿಸಲಾಗಿದೆ ಎಂದಿದ್ದಾರೆ. ಬೇರೆ ಬೇರೆ ಲಸಿಕೆ ಪಡೆದವರು ಒತ್ತಡದಲ್ಲಿದ್ದಾರೆ. ಆದರೆ, ಯಾರಲ್ಲೂ ಯಾವುದೇ ಸಮಸ್ಯೆ ಕಂಡು ಬಂದಿಲ್ಲ ಎಂದು ಆರೋಗ್ಯಾಧಿಕಾರಿಯೊಬ್ಬರು ಹೇಳಿದ್ದಾರೆ.

# ಸಿಎಂ ಬದಲಾದರೆ ಸರ್ಕಾರ ಪತನ



ದಾವಣಗೆರೆ, ಮೇ 26- ರಾಜ್ಯದಲ್ಲಿ ಮುಂದಿನ ಚುನಾವಣೆ ಗೆಲ್ಲಲು ಯಡಿಯೂರಪ್ಪ ಅವರ ನಾಯಕತ್ವದಿಂದ ಮಾತ್ರ ಸಾಧ್ಯ. ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಿದರೆ, ಸರ್ಕಾರ ಪತನಗೊಳ್ಳುವುದರಲ್ಲಿ ಸಂದೇಹವೇ ಇಲ್ಲ ಎಂದು ಜಿಲ್ಲೆಯ ಹಿರಿಯ ಮುಖಂಡ ಎನ್.ಜಿ.ಪುಟ್ಟಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾವಣೆ ಮಾಡಲು ಕೆಲವು ಶಾಸಕರು, ರಾಷ್ಟ್ರಮಟ್ಟದ ಬಿಜೆಪಿ ವರಿಷ್ಠರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂಬುದು ಊಹಾಪೋಹ ಅಷ್ಟೇ ಎಂದು ಹೇಳಿದ್ದಾರೆ. ಕುಹಕ ಶಕ್ತಿಗಳು ಸೇರಿಕೊಂಡು ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸಿದರೆ, ಕರ್ನಾಟಕದಲ್ಲಿ ರಾಜ್ಯ ಸರ್ಕಾರ ಪತನಗೊಳ್ಳಲಿದೆ ಎಂದು ಪುಟ್ಟಸ್ವಾಮಿ ಹೇಳಿದ್ದಾರೆ.

ರಾಜ್ಯದಲ್ಲಿ ಶೇ.99ರಷ್ಟು ಶಾಸಕರು ಯಡಿಯೂರಪ್ಪನವರ ಪರವಾಗಿಯೇ ಇದ್ದಾರೆ. ಸಿಎಂ ಕೂಡ ಎಲ್ಲಾ ಸಮುದಾಯದ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ರಾಜ್ಯದಲ್ಲಿ ಮುಂಬರುವ ಚುನಾವಣೆಯನ್ನು ಸಮರ್ಥವಾಗಿ ಎದುರಿಸುವ ಶಕ್ತಿ ಯಡಿಯೂರಪ್ಪನವರಿಗೆ ಮಾತ್ರ ಇದೆ ಎಂದು ಪುಟ್ಟಸ್ವಾಮಿ ಹೇಳಿದ್ದಾರೆ.


# ಭಾವಪೂರ್ಣ ಶ್ರದ್ಧಾಂಜಲಿ



ನಮ್ಮನ್ನೆಲ್ಲ ಅಗಲಿದ ಹರಿಹರ ತಾ. ಕೊಮಾರನಹಳ್ಳಿ ಗ್ರಾಮದ ಜನಪ್ರಿಯ ಮುಖಂಡರೂ, ನ್ಯಾಯಬೆಲೆ ಅಂಗಡಿ ಮಾಲೀಕರೂ ಆದ ಸ್ನೇಹ ಜೀವಿ

**ಶ್ರೀ ಎಸ್. ರಂಗಪ್ಪ**

ಅವರಿಗೆ ಭಾವಪೂರ್ಣ ನಮ್ಮ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

- ಅಧ್ಯಕ್ಷರು ಮತ್ತು ಪದಾಧಿಕಾರಿಗಳು **ಕರ್ನಾಟಕ ರಾಜ್ಯ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು,**
- ಅಧ್ಯಕ್ಷರು ಮತ್ತು ಪದಾಧಿಕಾರಿಗಳು **ಜಿಲ್ಲಾ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘ (ರಿ), ದಾವಣಗೆರೆ,**
- ಅಧ್ಯಕ್ಷರು ಮತ್ತು ಪದಾಧಿಕಾರಿಗಳು, **ತಾಲ್ಲೂಕು ಪಡಿತರ ವಿತರಕ ಕ್ಷೇಮಾಭಿವೃದ್ಧಿ ಸಂಘ (ರಿ), ಹರಿಹರ ಮತ್ತು ಹರಿಹರ ತಾಲ್ಲೂಕಿನ ಎಲ್ಲಾ ನ್ಯಾಯ ಬೆಲೆ ಅಂಗಡಿ ಮಾಲೀಕರುಗಳು**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte